ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 27 ಜುಲೈ 11, 1982 ಬೆಲೆ 60 ಪೈಸೆ

ಬಂಗಾರಪ್ಪನವರ ರಾಜಿನಾಮೆ

ದೇವರಾಜಅರಸು ಅವರು ಇಂದಿರಾ ಕಾಂಗ್ರೆಸ್ಸಿನಿಂದ ಪ್ರತ್ಯೇಕವಾಗಿ ರಾಜ್ಯದಲ್ಲಿ ಕಾಂಗ್ರೆಗೆ ಸವಾಲನ್ನೊಡ್ಡಿದ ಸಂದರ್ಭದಲ್ಲಿ ಇಂದಿರಾ ಕಾಂಗ್ರೆಸ್ಸಿನೊಂದಿಗೆ ಬಲವಾಗಿ ನಿಂತುಕೊಂಡು, ಮುಂದೆ ಕರ್ನಾಟಕ ಪ್ರದೇಶ ಕಾಂಗ್ರೆಸ್(ಐ)ಸಮಿತಿಯ ಅಧ್ಯಕ್ಷರೂ, ಗುಂಡೂರಾವ್ ಸರ್ಕಾರದಲ್ಲಿ ಸಚಿವರೂ ಆಗಿದ್ದ ಶ್ರೀ ಬಂಗಾರಪ್ಪನವರು ಇದೀಗ ತನ್ನ ಕೆಲವು ಬೆಂಬಲಿಗರೊಂದಿಗೆ ಕಾಂಗ್ರೆಯನ್ನು ತ್ಯಜಿಸಿ ಹೊರಬಂದಿರುವರು. ಇಂದಿರಾಗಾಂಧಿಯವರ ಪ್ರಜಾಪ್ರಭುತ್ವ ವಿರೋಧಿ ಮತ್ತು ಸರ್ವಾಧಿಕಾರಿ ನಡವಳಿಕೆಗಳಿಂದಲೂ, ವಂಶೀಯ ಅಧಿಕಾರವನ್ನು ಸ್ಥಾಪಿಸಲು ನಡೆಸುವ ಕುತಂತ್ರಗಳಿಂದಲೂ, ರಾಜ್ಯದಲ್ಲಿ ಗುಂಡೂರಾವ್ ಸರಕಾರದ ಅದಕ್ಷ ಮತ್ತು ಭ್ರಷ್ಟ ಆಡಳಿತ ಹಾಗೂ ಸ್ವಜನ ಪಕ್ಷಪಾತ ನೀತಿಗಳಿಂದಲೂ ಬೇಸತ್ತು ತಾನು ಕಾಂಗ್ರೆಯನ್ನು ತ್ಯಜಿಸಿರುವೆನಾಗಿ ಹೇಳಿರುವ ಬಂಗಾರಪ್ಪನವರು, ತಾನು ಕಾಂಗ್ರೆ ಸರ್ವಾಧಿಕಾರಕ್ಕೆ ಎದುರಾಗಿ ವಿರೋಧ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿಕೊಳ್ಳುವುದಾಗಿ ಸಾರಿರುವರು.

ಕರ್ನಾಟಕ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್‌ನೊಳಗೆ ತೀವ್ರವಾದ ಭಿನ್ನಾಭಿಪ್ರಾಯಗಳೂ, ಗುಂಪು ಕಲಹಗಳೂ, ಹೊಡೆದಾಟಗಳೂ, ಕಳೆದ ಒಂದೆರಡು ವರ್ಷಗಳಿಂದ ತೀವ್ರವಾಗಿ ಬೆಳೆಯುತ್ತಾ ಬಂದಿವೆ. ಕೆಲವೇ ದಿನಗಳ ಹಿಂದೆ

ಸಂಪಾದಕೀಯ

ಪ್ರದೇಶ ಕಾಂಗ್ರೆಸ್ (ಐ) ನ ಅಧ್ಯಕ್ಷ ಶ್ರೀ ಕೆ. ಟಿ. ರಾಠೋಡ್ ಅವರನು ಸದ್ದುಗದ್ದಲಗಳಿಲ್ಲದೆ ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಿರುವ ಹಿನ್ನೆಲೆಯಲ್ಲಿ ಶ್ರೀ ಬಂಗಾರಪ್ಪ ಮತ್ತು ಅವರ ಬೆಂಬಲಿಗರ ರಾಜಿನಾಮೆಯು ಕಾಂಗ್ರೆಸ್ (ಐ) ಯ ರಾಜ್ಯ ಘಟಕದಲ್ಲಿ ತೀವ್ರ ಬಿರುಕು ಬಿಟ್ಟಿರುವ ಸೂಚನೆಯಾಗಿದೆ. ಕಾಂಗ್ರೆಯಲ್ಲಿನ ಒಳಜಗಳ ಮತ್ತು ಗುಂಪುಗಾರಿಕೆಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಂದಿರಾ ಕಾಂಗ್ರೆಸ್ ಸಂಘಟನೆ ಇಡೀ ಈ ರೋಗಕ್ಕೆ ಬಲಿಯಾಗಿದೆ. ಇಂದಿರಾಗಾಂಧಿ ಅವರ ಪ್ರಜಾಪ್ರಭುತ್ವ ವಿರೋಧಿ ಮತ್ತು ಸರ್ವಾಧಿಕಾರಿ ಕ್ರಮಗಳಿಂದ ಮತ್ತು ಸಂದರ್ಭಸಾಧಕ ನೀತಿಗಳಿಂದಲಾಗಿ ಕಾಂಗ್ರೆ ಸಂಘಟನೆಯು ಕುಸಿಯತೊಡಗಿದೆ. ಇಂದಿರಾಗಾಂಧಿಯವರ ವೈಯುಕ್ತಿಕ ಪ್ರಭಾವವು ಜನತೆಯ ಮಧ್ಯೆ ಕಡಮೆಯಾಗುತ್ತಿರುವಂತೆಯೇ ಕಾಂಗ್ರೆ ಸಂಘಟನೆಯಲ್ಲೂ ಅದರ ಹಿಡಿತ ಸಡಿಲವಾಗುತ್ತಿರುವುದೂ ಕಂಡುಬರುತ್ತಿದೆ.

ಅದೇನೇ ಕಾರಣಗಳಿರಬಹುದಾದರೂ ಬಂಗಾರಪ್ಪ ಮತ್ತು ಅವರ ಕೆಲವು ಬೆಂಬಲಿಗರು ಕಾಂಗ್ರೆಯನ್ನು ತ್ಯಜಿಸಿ ಹೊರಬಂದಿರುವುದು ಸ್ವಾಗತಾರ್ಹ. ಬಂಗಾರಪ್ಪನವರ ಈ ಕ್ರಮವು ರಾಜ್ಯದಲ್ಲಿ ವಿರೋಧ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವುದಕ್ಕೂ, ಕಾಂಗ್ರೆ ದುರಾಡಳಿತವನ್ನು ವಿರೋಧಿಸುವುದಕ್ಕೂ ಸಹಾಯವಾಗಬಹುದು. ಸಂದರ್ಭಸಾಧಕ ರಾಜಕೀಯವನ್ನು ಬಿಟ್ಟು ಸ್ಪಷ್ಟ ನಿಲುವು ಮತ್ತು ಜನ ಪರವಾದ ಧೋರಣೆಗಳನ್ನು ಬಂಗಾರಪ್ಪ ಮತ್ತು ಅವರ ಬೆಂಬಲಿಗರು ಅನುಸರಿಸಿದರೆ ಅವರಿಗೆ ಜನ ಬೆಂಬಲ ದೊರೆಯಬಹುದು; ವಿರೋಧ ಪಕ್ಷಗಳ ಸಹಕಾರವೂ ದೊರೆಯಬಹುದು.

ಕೆ.ಜಿ.ಎಫ್.ನಲ್ಲಿ ಪೋಲೀಸ್ ಅತಿರೇಕ

ಗೋಲಿಬಾರಿಗೆ ಐವರ ಬಲಿ

ಗೋಕಾಕ್ ಸಮಿತಿ ಶಿಫಾರಸಿನಂತೆ ಕನ್ನಡವನ್ನು ಹೈಸ್ಕೂಲು ವಿದ್ಯಾಭ್ಯಾಸದ ಮಟ್ಟದಲ್ಲಿ ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಿರುವ ಕರ್ನಾಟಕ ರಾಜ್ಯ ಸರಕಾರದ ಕ್ರಮವನ್ನು ಪ್ರತಿಭಟಿಸಿ, ಅಲ್ಪ ಸಂಖ್ಯಾತ ಭಾಷಿಗರ ಮೇಲೆ ಕನ್ನಡವನ್ನು ಕಡ್ಡಾಯವಾಗಿ ಹೇರಬಾರದು ಎಂಬ ಬೇಡಿಕೆಯನ್ನು ಮುಂದಿಟ್ಟು ಶಾಂತಿಯುತವಾಗಿ ಮೆರವಣಿಗೆ ನಡೆಸುತ್ತಿದ್ದ ಕೆ.ಜಿ ಎಫ್.ನ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮತ್ತು ಗೋಲೀಬಾರ್ ನಡೆಸಿದ ಪರಿಣಾಮವಾಗಿ ಪರಿಸ್ಥಿತಿಯು ಉದ್ರಿಕ್ತವಾಗಃವಂತಾಯಿತು. ಪೋಲೀಸ್ ಅತಿರೇಕದಿಂದ ರೊಚ್ಚಿಗೆದ್ದ ಜನ ಪ್ರತಿಭಟಿಸಿದಾಗ ಮತ್ತೆ ಗೋಲಿಬಾರ್ ನಡೆದು ಐದು ಜನ ಸಾವನ್ನಪ್ಪುವಂತಾಗಿದೆ. ನೂರಾರು ಮಂದಿಗೆ ತೀವ್ರ ಗಾಯಗಳಾಗಿವೆ. ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದೆ. ಜುಲೈ 5, 6, ಮತ್ತು 7 ರಂದು ಕೆ. ಜಿ ಎಫ್. ನಲ್ಲಿ ನಡೆದ ಪೋಲೀಸ್ ಅತಿರೇಕದಿಂದಲಾಗಿ ಅನೇಕ ಸಾವು ನೋವುಗಳಾಗಿವೆ. ಪೋಲೀಸ್ ಅತಿರೇಕವನ್ನು ಪ್ರತಿಭಟಿಸಿ ಜುಲೈ 7 ರಂದು ಕೆ. ಜಿ. ಎಫ್. ನಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳಾದ ಕಾಂ. ಟಿ. ಎಸ್. ಮಣಿ ಮತ್ತು ಕಾಂ. ಎಸ್. ಸಮರಿದಾಸ್, ಕರ್ನಾಟಕ ಕ್ರಾಂತಿ ರಂಗದ ಶಾಸಕ ಶ್ರೀ ಪೆರುಮಾಳ್ ಮತ್ತು ಇನ್ನಿತರ ಕೆಲವು ಪಕ್ಷಗಳ ಪ್ರತಿನಿಧಿಗಳು ಜಿಲ್ಲಾಧಿಕಾರಿಯವರನ್ನು ಭೇಟಿಯಾಗಿ ತಾವು ಕನ್ನಡಕ್ಕೆ ವಿರೋಧವಿಲ್ಲವೆಂದೂ, ಆದರೆ ಕನ್ನಡವನ್ನು ಕನ್ನಡೇತರ ವಿದ್ಯಾರ್ಥಿಗಳ ಮೇಲೆ ಕಡ್ಡಾಯವಾಗಿ ಹೇರುವುದು ಸರಿ ಇಲ್ಲವೆಂದೂ, ಅಲ್ಪ ಸಂಖ್ಯಾತ ಭಾಷಿಗರ ಹಿತಾಸಕ್ತಿಗಳನ್ನು ಕಡೆಗಣಿಸಲು ಸರಕಾರವು ಮುಂದಾಗಬೇಕೆಂದೂ ಮನವಿ ಮಾಡಿರುವರು. ಶಾಸಕ ಹಾಗೂ ರಿಪಬ್ಲಿಕನ್ ಪಕ್ಷದ ಮುಖಂಡ ಅಮುರ್ಗಂ ಅವರು ಸಭೆಯೊಂದರಲ್ಲಿ ಸರಕಾರದ ನಿಲುವನ್ನು ಸ್ವಾಗತಿಸುತ್ತಾ ತನ್ನ ಮಕ್ಕಳು ಕನ್ನಡ ಕಲಿತಿರುವರಾಗಿಯೂ, ಕನ್ನಡಬಾರದವರು ಕರ್ನಾಟಕವನ್ನು ಬಿಟ್ಟು ತೊಲಗಿ ಹೋಗಬೇಕೆಂದೂ ಹೇಳಿದುದರಿಂದ, ಮೊದಲೇ ಸರ್ಕಾರದ ಭಾಷಾ ನೀತಿಯ ಬಗ್ಗೆ ಅಸಮಾಧಾನದಿಂದಿದ್ದ ವಿದ್ಯಾರ್ಥಿಗಳು ರೊಚ್ಚಿಗೆದ್ದರೆಂದು ಹೇಳಲಾಗಿದೆ. ಕೋಲಾರ ಜಿಲ್ಲೆಯ ಕೆ. ಜಿ. ಎಫ್. ನ

(8ನೇ ಪುಟ ನೋಡಿ)

ರಾಷ್ಟ್ರಪತಿ ಚುನಾವಣೆ---

ಒಂದು ರಾಜಕೀಯ ಹೋರಾಟ

ರಾಷ್ಟ್ರೀಯ ಪತ್ರಿಕೆಗಳ ಸಂಪಾದಕೀಯಗಳು ಮತ್ತು ಕೆಲವು ಎಡಪಾದೀ ಪತ್ರಿಕೆಗಳು ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಮತ್ತು ಕಾಂಗ್ರೆಸ್ ನಡುವಣ ಘರ್ಷಣೆಯಲ್ಲಿ ವಿರೋಧ ಪಕ್ಷಗಳು ಸೋಲುಗೈ ಪಡೆದಿವೆ ಮತ್ತು ಜಾಣ್ಮೆಯಾಟದಲ್ಲಿ ಸೋತಿವೆ ಎಂದು ಆಪಾದಿಸಿವೆ. ಒಮ್ಮತದ ಅಭ್ಯರ್ಥಿಯನ್ನು ಸೂಚಿಸುವುದರ ಮೂಲಕ, ಕಾಂಗ್ರೆಸ್‌ನ ಮೇಲೆ ತಮ್ಮ ಉಮೇದುವಾರನನ್ನು 'ಹೇರುವ' ಪ್ರಯತ್ನ ನಡೆಸಿದರೆಂದೂ, ಆದರೆ ಈ ಆಟವನ್ನು ಪ್ರಧಾನಮಂತ್ರಿ ತಮ್ಮದೇ ಅಭ್ಯರ್ಥಿಯನ್ನು ಆಯುವುದರ ಮೂಲಕ ಹಾಳುಗೆಡವಿದರೆಂದು ಹೇಳಲಾಗಿದೆ.

ವಾಸ್ತವವಾಗಿ ನಡೆದದ್ದೇನು ?

ವಿರೋಧ ಪಕ್ಷಗಳ ಪತ್ರಕ್ಕೆ ಉತ್ತರ ಬರೆಯುವ ಸೌಜನ್ಯವನ್ನು ಪ್ರಧಾನಿಯವರು ತೋರದಿದ್ದಾಗ ಈಗ ಉಪರಾಷ್ಟ್ರಪತಿಯಾಗಿರುವವರ ಹೆಸರನ್ನು ಸೂಚಿಸಲಾಯಿತು. ಇದನ್ನು ವಿರೋಧ ಪಕ್ಷಪಾತಿಯನ್ನು ಹೇರುವ ಯತ್ನವೆನ್ನಬಹುದೆ ? ಪ್ರಧಾನಿಯವರು ಬೇರ್ಯಾವ ಹೆಸರನ್ನು ಮಂಡಿಸುವುದಾದರೂ ಆ ಬಗ್ಗೆ ಚರ್ಚಿಸಲು ವಿರೋಧ ಪಕ್ಷಗಳು ತಯಾರಿದ್ದವೆಂಬುದನ್ನು ಗಮನದಲ್ಲಿಡಬೇಕು. ಪ್ರಧಾನಿಯವರು ಶ್ರೀ ಹಿದಾಯತುಲ್ಲಾರ ಹೆಸರಿನ ಬಗ್ಗೆಯಾಗಲೀ ಅಥವಾ ಬೇರೊಂದು ಒಮ್ಮತದ ಅಭ್ಯರ್ಥಿಯ ಬಗ್ಗೆ ಚರ್ಚಿಸಲು ಯಾಕೆ ಮುಂದೆ ಬರಲಿಲ್ಲವೆಂಬ ಪ್ರಶ್ನೆಯನ್ನು ಈ ಪತ್ರಿಕೆಗಳು ಎತ್ತುವುದೇ ಇಲ್ಲ ಹೀಗಿದ್ದಾಗ್ಯೂ ವಿರೋಧ ಪಕ್ಷಗಳು ತಮ್ಮ ಅಭ್ಯರ್ಥಿಯನ್ನು ಹೇರುವ ಪ್ರಯತ್ನವನ್ನು ಮಾಡಿವೆ ಎಂದು ಆರೋಪಿಸಿವೆ.

ಕಡೇಗಳಿಗೆಯವರೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಆ ಮೂಲಕ ವಿರೋಧ ಪಕ್ಷಗಳು ತಮ್ಮ ಅಭ್ಯರ್ಥಿಯನ್ನು ನಿಲ್ಲಿಸಲಾಗದಂತೆ ಮಾಡುವ ಇಂದಿರಾ ಸಂಚು ನಿಜವಾಗಿ ವಿಫಲವಾದದ್ದು.

ಒಮ್ಮತದ ಅಭ್ಯರ್ಥಿಯ ಅಗತ್ಯವಿತ್ತೆ? ಇದಕ್ಕೆ ಹಿಂದೆಂದಾದರೂ ಉದಾಹರಣೆಗಳಿವೆಯೆ ? ಆಳುವ ಪಕ್ಷಕ್ಕೆ ತನ್ನ ಅಭ್ಯರ್ಥಿಯನ್ನು ಆರಿಸುವ ಸ್ವಾತಂತ್ರ್ಯವಿಲ್ಲದಿದ್ದರೆ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ ನಡುವೆ ಘರ್ಷಣೆ ಉಂಟಾಗುವುದಿಲ್ಲವೆ ಎಂಬ ಪ್ರಶ್ನೆಗಳನ್ನು ಎತ್ತಲಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ರಾಜ್ಯ ಮತ್ತು ಕೇಂದ್ರದಲ್ಲಿ ಬಲಿಷ್ಠವಾಗಿದ್ದರೂ, ಜನಗಳ ಮಧ್ಯೆ ಅದರ ಪ್ರಭಾವ ಕಡಿಮೆಯಾಗಿರುವುದನ್ನು ಮರೆತಿದ್ದಾರೆ.

ವಿರೋಧಿಪಕ್ಷಗಳ ಸಹಕಾರವನ್ನು ಆಗಾಗ್ಗೆ ಕೇಳುವ ಪ್ರಧಾನಮಂತ್ರಿಯವರು ಈ ಬಗ್ಗೆ ಪ್ರಾಮಾಣಿಕರಾಗಿದ್ದಲ್ಲಿ ವಿರೋಧಪಕ್ಷಗಳ ಸೂಚನೆಗೆ ತಿರಸ್ಕಾರದಿಂದ ವರ್ತಿಸುತ್ತಿರಲಿಲ್ಲ.

ಒಮ್ಮತವೆಂದರೇನು ?

ಈ ಬಗ್ಗೆ ಎರಡು ವಿಷಯಗಳನ್ನು ಒತ್ತಿ ಹೇಳಬೇಕಾಗಿದೆ. ಮೊದಲನೆಯದು, ಒಮ್ಮತದ ವಿಚಾರವೆಂದರೆ, ವಿರೋಧಪಕ್ಷಗಳು ಮತ್ತು ಆಳುವ ಪಕ್ಷಕ್ಕೆ ಒಪ್ಪಿಗೆಯಾಗುವ ಅಭ್ಯರ್ಥಿಯನ್ನು ಆರಿಸುವ ಪ್ರಯತ್ನನಡೆಸುವುದು. ಇದರಲ್ಲಿ ಯಾವುದೇ ಪಕ್ಷವು ಇನ್ನೊಂದರ ಮೇಲೆ ತನ್ನ ಅಭ್ಯರ್ಥಿಯನ್ನು ಹೇರುವ ಪ್ರಶ್ನೆಯೇ ಇಲ್ಲ.

ಎರಡನೆಯದು, ಸಂವಿಧಾನದ ಪ್ರಕಾರ ರಾಷ್ಟ್ರಪತಿಯು ಮಂತ್ರಿ ಮಂಡಲದ ಸಲಹೆಗೆ ಬದ್ಧನಾಗಿ ನಡೆಯಬೇಕು. ಆದ್ದರಿಂದ ಮಂತ್ರಿಮಂಡಲದ ಸಲಹೆಯನ್ನು ರಾಷ್ಟ್ರಪತಿ ಧಿಕ್ಕರಿಸುವ ಅಪಾಯವಾಗಲೀ, ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ ನಡುವಣ ಘರ್ಷಣೆಯ ಅಪಾಯವಾಗಲೀ ಇಲ್ಲ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿರೋಧ ಪಕ್ಷದ ಅಭ್ಯರ್ಥಿಯನ್ನು ಒಪ್ಪಿಕೊಂಡಿದ್ದರೆ, ಅಥವಾ ಜೇಲ್‌ಸಿಂಗರ ಬದಲು ಖನ್ನ ಅಯ್ಕೆಯಾದರೂ ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲದ ಅಧಿಕಾರಕ್ಕೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಶ್ರೀ ಯುತ ಖನ್ನಾ ಕೂಡ ತಮ್ಮ ಜೂನ್ 28ರ ಪತ್ರಿಕಾ ಹೇಳಿಕೆಯಲ್ಲಿ ಇದನ್ನೆ ಹೇಳಿದ್ದಾರೆ. ತಾವು ಮಂತ್ರಿಮಂಡಲದೊಡನೆ ಯಾವ ಘರ್ಷಣೆಗೂ ವಿರೋಧಿಯೆಂದೂ ಹೇಳಿದ್ದಾರೆ. ಸಂವಿಧಾನಬದ್ಧವಾಗಿ ನಡೆದುಕೊಂಡಲ್ಲಿ ಯಾವ ಬಿಕ್ಕಟ್ಟವೂ ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ವಿರೋಧ ಪಕ್ಷಗಳನ್ನು ಗಣನೆಗೆ ತೆಗೆದುಕೊಳ್ಳದೆ, ಆ ಪಕ್ಷಗಳ ಅಭ್ಯರ್ಥಿಗಳನ್ನು ತಿರಸ್ಕರಿಸಿ ಜೇಲ್‌ಸಿಂಗರನ್ನೇ

(8ನೇ ಪುಟ ನೋಡಿ)

ಕಾಂ. ಗಿಯೋರ್ಗಿ ದಿಮಿತ್ರೋವ್ ಅವರ ಬಗ್ಗೆ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಪ್ರಶಂಸೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯು ಅಂತರ ರಾಷ್ಟ್ರೀಯ ಕಾರ್ಮಿಕ ವರ್ಗದ ಮಹಾನ್ ನಾಯಕ, ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಅತಿ ಮುಖ್ಯ ಸ್ಥಾನಗಳನ್ನು ಹೊಂದಿದ್ದ ಮತ್ತು ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಪ್ರಧಾನ ಕಾರ್ಯದರ್ಶಿಯಾಗಿ (ಕಾಂ। ಲೆನಿನ್ ಅವರಿಂದ ಸ್ಥಾಪಿಸಲ್ಪಟ್ಟ) ಸೇವೆ ಸಲ್ಲಿಸಿದ ಕಾಂ। ಗಿಯೋರ್ಗಿ ದಿಮಿತ್ರೋವ್ ಅವರ ನೆನಪಿಗಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ಬಲ್ಗೇರಿಯಾದ ಕಾರ್ಮಿಕ ವರ್ಗದ ಮತ್ತು ಜನತೆಯ ಪುತ್ರನಾಗಿ 1882ರಲ್ಲಿ ಜನಿಸಿದ ಇವರು ತಮ್ಮ 15ನೇ ವಯಸ್ಸಿನಲ್ಲಿಯೇ ಮುದ್ರಣಾಲಯದ ಕಾರ್ಮಿಕನಾಗಿ ಜೀವನವನ್ನು ಆರಂಭಿಸಿದರು. ತಮ್ಮ ಸ್ವಂತ ಜೀವನದ ಅನುಭವದಿಂದ ಶೋಷಣೆಯ ಮುಖಗಳನ್ನು ಗುರುತಿಸಿ, ಕಾರ್ಮಿಕ ವರ್ಗ ಮತ್ತು ಬಂಡವಾಳಶಾಹಿಗಳ ತೀವ್ರ ವೈರುಧ್ಯವನ್ನು ಕಂಡು ಅಂದಿನ ಸಮಾಜವಾದಿ ಚಳುವಳಿಯಲ್ಲಿ ಸೇರಲು ಹೆಚ್ಚಿನ ಕಾಲ ತೆಗೆದುಕೊಳ್ಳಲಿಲ್ಲ. ಮತ್ತು ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷದ ಸದಸ್ಯರಾದರು.

ತಮ್ಮ ಸಮಾಜವಾದಿ ಪರಿಜ್ಞಾನದ ತಿಳುವಳಿಕೆಯಿಂದ ಸಕ್ರಿಯವಾಗಿ ಕಾರ್ಮಿಕ ವರ್ಗದ ಮತ್ತು ಕಾರ್ಮಿಕ ಸಂಘಟನೆಯ ಚಳುವಳಿಯಲ್ಲಿ ಭಾಗವಹಿಸಿ ಅತಿಶೀಘ್ರದಲ್ಲಿ ಬಲ್ಗೇರಿಯಾ ದೇಶದ ಕ್ರಾಂತಿಕಾರಿ ಕಾರ್ಮಿಕ ಸಂಘದ ಜನರಲ್ ಕೌನ್ಸಿಲ್ ಸದಸ್ಯರಾದರು. ತಮ್ಮ ಅವಿಶ್ರಾಂತ ಕಾರ್ಯಶೀಲತೆ ಮತ್ತು ಬೃಹತ್ ಮುಷ್ಕರಗಳ ರಣರಂಗದಲ್ಲಿನ ನಾಯಕತ್ವಗಳಿಂದ ಕಾರ್ಮಿಕರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದರು. ಮತ್ತು ಪಾರ್ಲಿಮೆಂಟಿನಲ್ಲಿ ಕಾರ್ಮಿಕರ ಪ್ರತಿನಿಧಿಯಾಗಿ 1913ರಿಂದ 1923ರವರೆಗೆ ಪ್ರತಿನಿಧಿಯಾಗಿ ಆಯ್ಕೆಯಾದರು.

ಅವರು ಕಾರ್ಮಿಕ ವರ್ಗದ ಬಗ್ಗೆ ತಳೆದ ದಿಟ್ಟ ನಿಲವು ಮತ್ತು ಪಾರ್ಲಿಮೆಂಟಿನಲ್ಲಿ ಬಂಡವಾಳಶಾಹಿಗಳನ್ನು ಬಯಲಿಗೆಳೆಯುವ ಸಮಯದಲ್ಲಿಯೇ ಹೊರಗೂ ಸಾಮೂಹಿಕ ಚಳುವಳಿಗಳಿಗೆ ನಾಯಕತ್ವ ಕೊಟ್ಟರು. ಇದರ ಪರಿಣಾಮ ಬಂಡವಾಳಶಾಹಿಗಳ ಮತ್ತು ಏಕಾಧಿಪತ್ಯದ ಕುಟಿಲೋಪಾಯಗಳಿಂದ ತೀವ್ರ ಶಿಕ್ಷೆಗೆ ಮತ್ತು ಬಂಧನಕ್ಕೆ ಒಳಗಾಗಬೇಕಾಯಿತು.

ಅವರು ಭಾಷಣಗಳು ಮತ್ತು ಮುಷ್ಕರದ ನಾಯಕತ್ವದಿಂದ ಸರ್ಕಾರದ ಘೋಷಣೆಗಳನ್ನು ಬಯಲಿಗೆಳೆಯುತ್ತಿದ್ದರಿಂದ ಹಲವಾರು ಭಾರಿ ಬಂಧನಕ್ಕೆ ಮತ್ತು ಜೈಲು ವಾಸವನ್ನು ಅನುಭವಿಸಬೇಕಾಯಿತು. ಹಲವಾರು ಸಂದರ್ಭದಲ್ಲಿ ಕಾರ್ಮಿಕ ವರ್ಗದ ಪ್ರತಿಭಟನೆಯಿಂದ ಶಿಕ್ಷೆಯಿಂದ ಪಾರಾದರು. ಫ್ಯಾಸಿಸ್ಟ್ ಸರ್ಕಾರವು ಎರಡು ಬಾರಿ ಮರಣ ದಂಡನೆ ವಿಧಿಸಿದರೂ, ಜಾರಿಗೊಳಿಸಲು ಸಾಧ್ಯವಾಗಲಿಲ್ಲ.

ದಿಮಿತ್ರೋವ್ ಅವರ ಕಾರ್ಯ ಚಟುವಟಿಕೆಯು ಅಂತರ ರಾಷ್ಟ್ರೀಯ ಮಟ್ಟದವರೆಗೆ ಹರಡಿತು. 1915ರಲ್ಲಿ ನಡೆದ ಎರಡನೇ ಬಾಲ್ಕನ್ ಸಮ್ಮೇಳನ ಮತ್ತಿತರ ಅಂತರ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಬಲ್ಗೇರಿಯಾದ ಕಾರ್ಮಿಕ ಸಂಘಗಳ ಕಾರ್ಮಿಕ ವರ್ಗದ ಮತ್ತು ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷದ ಪ್ರತಿನಿಧಿಯಾಗಿ ಪಾಲ್ಗೊಂಡರು. ಈ ಸಮ್ಮೇಳನಗಳಲ್ಲಿ ಇವರ ಭಾಗವಹಿಸುವಿಕೆ ರೊಮೇನಿಯನ್ ಸಿಟ್ಟನ್ನು ಇನ್ನಷ್ಟು ಹೆಚ್ಚಿಸಿ, ಬುಚರೆಸ್ಟ್‌ನಿಂದ ಇವರನ್ನು ಹಿಂದಿರುಗಿಸಲಾಯಿತು.

ಇವರ ನಿಷ್ಠಾವಂತ ಕೆಲಸದಿಂದ 'ಎಡ ಸಮಾಜವಾದಿ ಕೂಟದಲ್ಲಿ' ಪಕ್ಷಕ್ಕೆ ಸೇರಿದ ಕೇವಲ ಆರು ವರ್ಷಗಳಲ್ಲಿಯೇ ಕೇಂದ್ರ ಸಮಿತಿಗೆ 1903ರಲ್ಲಿ ಆಯ್ಕೆಯಾದರು. ಅಲ್ಲಿಂದೀಚೆಗೆ ಕೇಂದ್ರ ಸಮಿತಿಯ ಸದಸ್ಯರಾಗಿ ಮುಂದುವರೆದು ಪಕ್ಷದ ಸಂಘಟನೆ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿದರು. ಅತಿ ಶೀಘ್ರದಲ್ಲಿಯೇ ಮುಖ್ಯ ನಾಯಕರಾಗಿ ಮತ್ತು ಮಾರ್ಗದರ್ಶಕರಾಗಿ ಪಕ್ಷಕ್ಕೆ ಬೆಂಬಲ ನೀಡಿದರು. ಸಂಧರ್ಭೋಚಿತವಾಗಿ ಮಾರ್ಕ್ಸ್‌ವಾದದ ಮಾರ್ಗದರ್ಶನ ನೀಡುತ್ತ, ಬಲ್ಗೇರಿಯಾದ ಪಕ್ಷದ ಹಲವಾರು ತಪ್ಪುಗಳನ್ನು ಸರಿಪಡಿಸಲು ಮುಂದಾದರು.

ದಿಮಿತ್ರೋವ್ ಅವರು ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸುವಾಗ ಬಂಡವಾಳಶಾಹಿಯ ಬೆಳವಣಿಗೆ ಶಾಂತಿಯುತವಾಗಿ, ಬಂಡವಾಳಶಾಹಿಯಿಂದ ಸಾಮ್ರಾಜ್ಯಶಾಹಿಯತ್ತ ಬೆಳೆಯುತ್ತಿತ್ತು. ಬಂಡವಾಳಶಾಹಿಯು ಕ್ರಮಾನುಗತ ಬೆಳವಣಿಗೆಯಿಂದ ಕಾರ್ಮಿಕ ಚಳುವಳಿಯಲ್ಲಿ ವರ್ಗ-ಸಹಭಾಗತ್ವದ ಭ್ರಮೆ ಹುಟ್ಟಿಸಿ ಮಾರ್ಕ್ಸ್‌ವಾದಹೇಳುವ ಸಮಾಜವಾದಿ ಪ್ರಜಾಪ್ರಭುತ್ವವನ್ನು ವಿಕೃತಗೊಳಿಸುತ್ತಿತ್ತು. ಶಾಂತಿಯುತ ಪಾರ್ಲಿಮೆಂಟರಿ ಪಥದಮೂಲಕ ಸಮಾಜವಾದದ ಎಡೆಗೆ, ಹೋಗುವ, ಕ್ರಾಂತಿಯನ್ನು ಅಲ್ಲಗಳೆಯುವ, ವರ್ಗ ಸಂಘರ್ಷದ ತಿದ್ದುಪಡಿ ಇವೇ ಮೊದಲಾದ ಅಭಿಪ್ರಾಯಗಳು ಕಾರ್ಮಿಕರ ಮಧ್ಯೆ ಹರಡುತ್ತಿತ್ತು.

ಇದೇ ಸಮಯದಲ್ಲಿ ಮೊದಲನೇ ಮಹಾಯುದ್ಧ - ಸಾಮ್ರಾಜ್ಯಶಾಹಿಗಳಿಂದ ಯುದ್ಧದ ತಯಾರಿ ಮತ್ತು ಸೋಶಿಯಲ್ ಡೆಮಾಕ್ರೆಟಿಕ್‌ಗಳು ಕಾರ್ಮಿಕ ವರ್ಗವನ್ನು ಮೋಸಗೊಳಿಸಲು ಹವಣಿಸುತ್ತಿದ್ದ ಕಾಲಾವಧಿ. ರಷ್ಯಾದ ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷದ ಉದಯ ಮತ್ತು ಮಾರ್ಕ್ಸ್‌ವಾದದ ಸಿದ್ಧಾಂತವನ್ನು ಉಳಿಸಲು ಲೆನಿನ್‌ರವರು ನಡೆಸುತ್ತಿದ್ದ ಹೋರಾಟ ಇಂತಹ ಕಾಲಘಟ್ಟದಲ್ಲಿ ದಿಮಿತ್ರೋವ್ ಅವರು ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ್ದರು. ಲೆನಿನ್ ಅವರು ಅಂತರ ರಾಷ್ಟ್ರೀಯ ಸಮಾಜವಾದಿ ಪ್ರಜಾಪ್ರಭುತ್ವದಲ್ಲಿ ಬದಲಾವಣೆಯಾಗಬೇಕೆಂಬ ನಿಲುವಿನ ವಿರುದ್ಧ ತೀವ್ರ ಚಳುವಳಿ ನಡೆಸಿದರು. ಮತ್ತು ಬದಲಾವಣೆ ಬೇಕೆಂದು ಬಯಸುವವರನ್ನು ದೇಶ ದ್ರೋಹಿಗಳೆಂದು ಘೋಷಿಸಿ, ಬಂಡವಾಳಶಾಹಿಗಳ ಪ್ರಯತ್ನವಾದ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಬೆಂಬಲ ನೀಡುವುದನ್ನು ಟೀಕಿಸಿದರು.

ದಿಮಿತ್ರೋವ್ ಅವರು ಮಾರ್ಕ್ಸ್‌ವಾದದ ಸಿದ್ಧಾಂತಕ್ಕೆ ಬದ್ಧರಾಗಿ ಯುದ್ಧದ ಸಾಮ್ರಾಜ್ಯಶಾಹಿ ಗುಣಗಳನ್ನು ಕಂಡರು. 1915ರ ಸೆಪ್ಟೆಂಬರ್ 7 ರಂದು ಅವರು ಮತ್ತು ಇನ್ನಿತರ ಬಲ್ಗೇರಿಯಾದ ಸೋಶಿಯಲ್ ಡೆಮಾಕ್ರೆಟಿಕ್ ವರ್ಕರ್ಸ್ ಪಕ್ಷದ ಪಾರ್ಲಿಮೆಂಟ್ ಸದಸ್ಯರುಗಳ ಗುಂಪೊಂದು ಕಾರ್ಮಿಕರನ್ನು ಯುದ್ಧದ ವ್ಯೂಹದೊಳಗೆ ಎಳೆಯುವುದನ್ನು ವಿರೋಧಿಸಿ ಕರಪತ್ರವೊಂದನ್ನು ಹೊರತಂದರು. ಅವರು ತಮ್ಮ ಯುದ್ಧ ವಿರೋಧಿ ನೀತಿಯನ್ನು ಮುಂದುವರಿಸುತ್ತಾ, ಸರ್ಕಾರದ ಮಿಲಿಟರಿ ಆಯವ್ಯಯದ ಘೋಷಣೆಯನ್ನು ಖಂಡಿಸಿದರು. ಸೋಶಿಯಲ್ ಡಿಮಾಕ್ರಸಿಯ ದೃಷ್ಟಿಕೋನವು ಪಾರ್ಲಿಮೆಂಟರಿ ಪದ್ಧತಿಯ ಮೂಲಕ ಸಮಾಜವಾದ ಸಾಧಿಸುವ ಭ್ರಮೆ ಹುಟ್ಟಿಸಿತ್ತು. ಆದರೆ ದಿಮಿತ್ರೋವ್ ಇದಕ್ಕೆ ಹೆಚ್ಚಿನ ಮಹತ್ವ ನೀಡಲಿಲ್ಲ. ಸಂಪೂರ್ಣವಾಗಿ ವರ್ಗ ಸಂಘರ್ಷ ಮತ್ತು ಕ್ರಾಂತಿಯಲ್ಲಿ ನಂಬಿಕೆ ಇಟ್ಟು ಬಲ್ಗೇರಿಯಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ತೀರ್ಮಾನವಾದ ಸಶಸ್ತ್ರ ಹೋರಾಟವನ್ನು 1923ರ ಸೆಪ್ಟೆಂಬರ್ 22 ರಂದು ಸರ್ವಾಧಿಕಾರಿ ಸರ್ಕಾರದ ವಿರುದ್ಧ ನಡೆಸಬೇಕೆಂದು ಬೆಂಬಲ ನೀಡಿದರು. ಜನತೆಯ ಈ ವಿರೋಚಿತ ಬಂಡಾಯ ಸಫಲವಾಗಲಿಲ್ಲ ಮತ್ತು ಮುಖ್ಯ ಗುಪ್ತ ಪಡೆಗಳು ದೇಶದಿಂದ ಪಾರಾಗಬೇಕಾಯಿತು.

ದಿಮಿತ್ರೋವ್ ಅವರು ಅಕ್ಟೋಬರ್ ಕ್ರಾಂತಿಯಿಂದ ಸ್ಫೂರ್ತಿಗೊಂಡರು ಮತ್ತು ಪ್ರಭಾವಿತರಾದರು. ಅವರು ಶ್ರಮ ಜೀವಿಗಳ ಸರ್ಕಾರವು ಯುದ್ಧವನ್ನು ಕೊನೆಗೊಳಿಸಲು ನಿವೇದಿಸಿದಾಗ ರಷ್ಯಾದಲ್ಲಿ ಶಾಂತಿಬೇಕೆಂದು ಧ್ವನಿಗೂಡಿಸಿದರು ಮತ್ತು ಎಂಗಲ್ಸ್ ಮುಂತಾದವರು ರಷ್ಯಾದ ಅಂತರ್ಯುದ್ಧದಲ್ಲಿ ನೀಡಿದ ಸಹಾಯವನ್ನು ಬಹಿರಂಗವಾಗಿ ಟೀಕಿಸಿದರು.

ಅಕ್ಟೋಬರ್ ಕ್ರಾಂತಿಯನ್ನು ಸರಿಯಾಗಿ ಅರ್ಥೈಸಿಕೊಂಡ ಈ ಮಹಾನ್ ಹೋರಾಟಗಾರ ಮಾನವ ಕುಲದ ಹಣೆಬರಹ, ಕಾರ್ಮಿಕ ವರ್ಗದ ಭವಿಷ್ಯ ಮತ್ತು ವಿಶ್ವದ ಜನತೆಯ ಉಳಿಯುವಿಕೆ, ಪ್ರಗತಿ ಮತ್ತು ಶ್ರಮಜೀವಿಗಳ ಪ್ರಭುತ್ವ ಇವುಗಳು ಲೆನಿನ್‌ರವರ ನಾಯಕತ್ವದಲ್ಲಿ ಸೃಷ್ಟಿಗೊಂಡಿವೆಂದು ಮನಗಂಡರು.

ದಿಮಿತ್ರೋವ್ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಲು ಆಗಲಿಲ್ಲ. ಅಥವಾ ಎರಡನೆಯ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಕಾಂಗ್ರೆಸ್ಸಿನಲ್ಲಿಯೂ ಸಹ ಭಾಗವಹಿಸಲಿಲ್ಲ. ಏಕೆಂದರೆ ಮಾಸ್ಕೋಕ್ಕೆ ಹೋಗುವ ಮಾರ್ಗದಲ್ಲಿಯೇ ಬಂಧನಕ್ಕೆ ಒಳಗಾದರು. ಆದರೆ ಮೂರನೇ ಅಂತರ ರಾಷ್ಟ್ರೀಯದ ಸಮ್ಮೇಳನಕ್ಕೆ ಹಾಜರಿದ್ದರು. ಅಲ್ಲಿಂದೀಚೆಗೆ ಮೊದಲನೇ ಅಂತರ ರಾಷ್ಟ್ರೀಯ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಲೆನಿನ್ ನಂತರ ಸ್ಟಾಲಿನ್ ಅವರ ಮಾರ್ಗದರ್ಶನದಲ್ಲಿ ನಡೆದರು.

ಮೂರನೇ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಐದನೇ ವಿಶ್ವ ಕಾಂಗ್ರೆಸ್ಸಿನಲ್ಲಿ ದಿಮಿತ್ರೋವ್ ಕಾರ್ಯಕಾರಿ ಸಮಿತಿಯ ಉಮೇದಾರಿ ಸದಸ್ಯನಾಗಿ ಮೂರನೇ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯಕ್ಕೆ ಚುನಾಯಿತರಾದರು.

1928ರಲ್ಲಿ ಮಾಸ್ಕೋದಲ್ಲಿ ನಡೆದ ನಾಲ್ಕನೇ ಕಾಂಗ್ರೆಸ್ಸಿನಲ್ಲಿ ದಿಮಿತ್ರೋವ್ ವರದಿಯನ್ನು ಮಂಡಿಸಿದರು. 'ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸುವುದು ಹೇಗೆ ಮತ್ತು ಹಳದಿ ಸಂಘಗಳು' ಮತ್ತು ನಾಲ್ಕನೇ ಕಾಂಗ್ರೆಸ್ಸಿನಲ್ಲಿ ಫ್ಯಾಸಿಸಂ ವಿರುದ್ಧ ಹೋರಾಟದ ಬಗ್ಗೆ ಒಂದು ಠರಾವನ್ನು ಮಂಡಿಸಿದರು.

ಆದರೆ ಫ್ಯಾಸಿಸಂನ ಅಪಾಯ ಬೆಳೆಯುತ್ತಾ ಮುಂದುವರಿಯಿತು.

1933ರಲ್ಲಿ ಜರ್ಮನಿಯಲ್ಲಿ ಹಿಟ್ಲರನ ನಾಝಿ ಪಕ್ಷವು ಅಧಿಕಾರಕ್ಕೆ ಬಂದಿತು. ಜರ್ಮನಿಯ ಕಮ್ಯುನಿಸ್ಟ್ ಪಕ್ಷದ ನಿವೇದನೆಯಾದ ಐಕ್ಯರಂಗವನ್ನು ಹಿಂದಿನ ಚುನಾವಣೆಗಳಲ್ಲಿ ಸೋಶಿಯಲ್ ಡೆಮಾಕ್ರೆಟಿಕ್ ನಾಯಕರು ತಿರಸ್ಕರಿಸಿದ್ದೇ ಕಾರಣವಾಯಿತು. ತುರ್ತು ಪರಿಸ್ಥಿತಿಯನ್ನು ಹೇರುವುದಕ್ಕಾಗಿ, ಸ್ವಾತಂತ್ರ್ಯ ಮತ್ತು ಜನತೆಯ ಮೂಲಭೂತ ಹಕ್ಕುಗಳು, ಕಾರ್ಮಿಕ ವರ್ಗದ ಹಕ್ಕುಗಳನ್ನು ರದ್ದುಗೊಳಿಸಿ, ಯುದ್ಧಕ್ಕೆ ಸಿದ್ಧತೆ ನಡೆಸುವ ಪ್ರಯತ್ನದಲ್ಲಿ 'ರೀಚ್‌ಸ್ಟ್ಯಾಗ್' (ಜರ್ಮನಿಯ ಪಾರ್ಲಿಮೆಂಟ್ ಭವನ)ಗೆ ಬೆಂಕಿ ಇಟ್ಟು ಇದಕ್ಕೆ ಕಮ್ಯುನಿಸ್ಟ್ ಪಕ್ಷ ಹೊಣೆಗಾರರೆಂದು, ಕಾರಣ ಪ್ರಭುತ್ವದ ವಿರುದ್ಧ ಸಶಸ್ತ್ರ ಬಂಡಾಯ ನಡೆಸಲು ಸೂಚನೆ ಎಂದು ಘೋಷಿಸಿದರು.

ಆಗ ಜರ್ಮನಿಯಲ್ಲಿ ಗುಪ್ತ ವೇಷದಲ್ಲಿ ವಾಸಿಸುತ್ತಿದ್ದ ದಿಮಿತ್ರೋವ್ ಬಲ್ಗೇರಿಯಾದ ಕಮ್ಯುನಿಸ್ಟ್ ವಲಸೆಗಾರರ ಜೊತೆಯಲ್ಲಿ ಬಂಧಿತರಾದರು. ಮತ್ತು ಜರ್ಮನಿಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಶಸ್ತ್ರ ಬಂಡಾಯದ ಮೂಲಕ ಸರ್ಕಾರವನ್ನು ಬುಡಮೇಲುಮಾಡಲು ಮತ್ತು ರೀಚ್‌ಸ್ಟ್ಯಾಗ್‌ಗೆ ಅಗ್ನಿಸ್ಪರ್ಶಮಾಡಿ ನಾಶ ಮಾಡಲು ಪಿತೂರಿ ನಡೆಸುತ್ತಿದ್ದರೆಂಬ ಆಪಾದನೆಗಳನ್ನು ಎದುರಿಸಿದರು.

ಅಲ್ಲಿಂದ ಚರಿತ್ರೆಯಲ್ಲಿಯೇ ಪ್ರಸಿದ್ಧವಾದ ವಿಚಾರಣೆ ಪ್ರಾರಂಭವಾಯಿತು. ನ್ಯಾಯವಾದಿಗಳ ಸಹಾಯವಿಲ್ಲದೆ ತಮ್ಮನ್ನ ತಾವೇ ಪ್ರತಿಪಾದಿಸಿಕೊಂಡ ದಿಮಿತ್ರೋವ್ ವ್ಯಾಜ್ಯದಾರರನ್ನು ಎದುರಿಸಿ ವಿಚಾರ ಪ್ರವಾಹವನ್ನೇ ಹರಿಸಿದರು. ನ್ಯಾಯಾಲಯದಲ್ಲಿ ಇವರ ಪ್ರಯತ್ನಕ್ಕೆ ಹಲವಾರು ತೊಂದರೆಗಳು ಉಂಟಾದರೂ ಸಹ ತಮ್ಮ ಮೇಲೆ ಆಪಾದನೆಗಳನ್ನು ಹೊರಸಿದವರನ್ನು ಮತ್ತು ಹಿಟ್ಲರನ ನಾಝಿ ಶಾಸನಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರು. ತಮ್ಮನ್ನು ಪ್ರತಿಪಾದಿಸಿಕೊಳ್ಳುವ ಸಮಯದಲ್ಲಿಯೇ, ಜರ್ಮನಿಯ ಕಮ್ಯುನಿಸ್ಟ್ ಪಕ್ಷ, ವಿಶ್ವದಾದ್ಯಂತ ಕಮ್ಯುನಿಸ್ಟ್ ಪಕ್ಷಗಳ ಅಂತರ್‌ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸಂ ಅನ್ನು ಶಕ್ತಿಶಾಲಿಯಾಗಿ ಪ್ರತಿಪಾದಿಸಿದರು.

ಇವರ ಶಕ್ತಿಶಾಲಿ ಪ್ರತಿಪಾದನೆ ಮತ್ತು ನಾಝಿ ಶಾಸನಗಳ ಖಂಡನೆಗಳಿಂದ ವಿಶ್ವದಾದ್ಯಂತ ಕಮ್ಯುನಿಸ್ಟರು ಮತ್ತು ಪ್ರಜಾಪ್ರಭುತ್ವವಾದಿಗಳು ಎಚ್ಚರಗೊಂಡರು. ಇದರಿಂದಾಗಿ ಸರ್ವೋಚ್ಛ ನ್ಯಾಯಾಲಯವು ದಿಮಿತ್ರೋವ್ ಮತ್ತು ಇತರ ಆಪಾದಿತರುಗಳನ್ನು ಬಿಡುಗಡೆ ಮಾಡಲು ಒಪ್ಪಲೇಬೇಕಾಯಿತು. ಈ ವಿಚಾರಣೆಯು ಪ್ರಥಮವಾಗಿ ನಾಝಿಗಳಿಗೆ ಅಪಜಯವನ್ನು ತಂದಿತು. ಕಾರಣ ದಿಮಿತ್ರೋವ್ ನಡೆಸಿದ ಪ್ರಯತ್ನಗಳು.

1935ರಲ್ಲಿ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ 2ನೇ ಕಾಂಗ್ರೆಸ್ ಸಮಾವೇಶಗೊಳ್ಳುವ ಸಮಯದಲ್ಲಿ, ಫ್ಯಾಸಿಸಂ ಯೂರೋಪಿನಾದ್ಯಂತ್ಯ ಯುದ್ಧಕೋರ ನೀತಿ ಸಾರಿ, ಪ್ರಜಾಪ್ರಭುತ್ವ ಹಕ್ಕುಗಳಿಗೆ, ಪಾರ್ಲಿಮೆಂಟರಿ ಪದ್ಧತಿಗೆ ಅತ್ಯಂತ ಅಪಾಯಕಾರಿಯಾಗಿದ್ದಿತು. ಹಿಟ್ಲರನು ಜರ್ಮನಿಯಲ್ಲಿ ಸಹಸ್ರಾರು ಕಮ್ಯುನಿಸ್ಟರನ್ನು ವಧೆಮಾಡಿ ತನ್ನ ಅತ್ಯುಚ್ಛ ಆಡಳಿತವನ್ನು ಸ್ಥಾಪಿಸಿದ್ದನು.

(7ನೇ ಪುಟ ನೋಡಿ)

ಅಂತರ್ರಾಷ್ಟ್ರೀಯ

ಮಾನವಕುಲದ ವಿನಾಶಕ್ಕೆ ಅಮೇರಿಕಾ ಸಿದ್ಧತೆ

ಕಮ್ಯೂನಿಸ್ಟರ ಮೊದಲ ಶತ್ರುವಾಗಿರುವ ಸಾಮ್ರಾಜ್ಯಶಾಹಿ ಅಮೇರಿಕಾವು ಇಂದು ಇಡೀ ಜಗತ್ತಿನ ವಿನಾಶಕ್ಕೆ ಹೊರಟಿರುವ ಪರಮ ವೈರಿಯಾಗಿದೆ. ಬಂಡವಾಳಶಾಹಿ ದೇಶಗಳ ಮುಖಂಡನಾಗಿ "ನಾಟೋ" ಯುದ್ಧ ಕ್ಷೇತ್ರವನ್ನು ಸೃಷ್ಟಿಸಿಕೊಂಡು ಜಗತ್ತಿನ ಶಾಂತಿಗೆ ಗಂಡಾಂತರವಾಗಿ ಪರಿಣಮಿಸಿದೆ ಅಮೇರಿಕಾದ ರೇಗನ್ ಸರಕಾರ. ಕ್ಯೂಬಾ, ವಿಯೆಟ್ನಾಂ, ಕಾಂಪೂಚಿಯಾಗಳಲ್ಲಿ ಸಮಾಜವಾದಿ ವ್ಯವಸ್ಥೆ ನೆಲೆಯೂರದಂತೆ ಮಾಡಲು ಸರ್ವ ಪ್ರಯತ್ನಮಾಡಿ ವಿಫಲವಾದ ಅಮೇರಿಕವು ಇಂದೂ ಆ ಪ್ರಯತ್ನವನ್ನು ಬಿಟ್ಟಿಲ್ಲ. ಚಿಲಿಯಲ್ಲಿ ಬಾರೀ ಬಹುಮತದೊಂದಿಗೆ ಚುನಾವಣೆಯಲ್ಲಿ ಆರಿಸಿ ಬಂದ ಪ್ರಗತಿ ಪರ ಧೋರಣೆಯ ಎಲೆಂಡೆ ಸರಕಾರವನ್ನು ಕ್ಷಿಪ್ರ ಮಿಲಿಟರಿ ದಂಗೆ ಮಾಡಿಸಿ ಕಿತ್ತೊಗೆದು ತನ್ನ ಬಾಲಬಡುಕ ಸರಕಾರವನ್ನು ರಚಿಸುವಲ್ಲಿ ಯಶಸ್ವಿಯಾದ ಶ್ವೇತ ಭವನದ ಅಧಿಕಾರ ವರ್ಗ ಅದೇ ಪ್ರಯತ್ನವನ್ನು ಎಲ್‌ಸಾಲ್ವಡೋರ್‌ನಲ್ಲಿ ಮಾಡುತ್ತಿದೆ. ಲೆಬನಾನ್ ಮೇಲೆ ಆಕ್ರಮಣ ಮಾಡಿದ ಇಸ್ರೇಲ್‌ಗೆ ಬೆಂಬಲ ಸಾರಿ, ಇರಾನ್ ವಿರುದ್ಧದ ಯುದ್ಧದಲ್ಲಿ ಇರಾಕ್‌ಗೆ ಯುದ್ಧ ಸಲಕರಣೆಗಳನ್ನು ನೀಡಿ, ಫಾಕ್‌ಲೆಂಡ್ ಯುದ್ಧದಲ್ಲಿ ಅರ್ಜೆಂಟೈನಾ ವಿರುದ್ಧ ಬ್ರಿಟನ್ನಿಗೆ ಕುಮ್ಮಕ್ಕು ನೀಡಿ, ಅಮೇರಿಕಾವು ಸ್ಪಷ್ಟವಾಗಿ ತನ್ನ ಪ್ರತಿಗಾಮಿ ಧೋರಣೆಯನ್ನು ಹೊರಗೆಡಹಿದೆ. ಎಫ್ 16 ವಿಮಾನಗಳೂ ಸೇರಿದಂತೆ ಆಧುನಿಕ ಯುದ್ಧ ಸಲಕರಣೆಗಳನ್ನು ಪಾಕಿಸ್ಥಾನಕ್ಕೆ ಒದಗಿಸುವ ಮೂಲಕ ಭಾರತದ ಸ್ವಾತಂತ್ರ್ಯಕ್ಕೇ ಅಪಾಯವನ್ನುಂಟುಮಾಡಿದೆ.

ಅಣ್ವಸ್ತ್ರಗಳೂ ಸೇರಿದಂತೆ ಜಗತ್ತಿನ ಜೀವರಾಶಿಗಳ ಉಳಿವಿಗೆ ಅಪಾಯಕಾರಿ ಯುದ್ಧಾಸ್ತ್ರ, ಬಾಂಬ್‌ಗಳ ತಯಾರಿಯ ನಿಲುಗಡೆ ಬಗ್ಗೆ ರಷ್ಯಾ ಮಂಡಿಸಿದ ಹೇಳಿಕೆಯನ್ನು ಧಿಕ್ಕರಿಸಿರುವ ಅಮೇರಿಕ ಇಂದು ಜಗತ್ತಿನಾದ್ಯಂತ ಯುದ್ಧ ಭೀತಿಯನ್ನು ಹರಡಿದ್ದು ಮಾನವ ಕುಲದ ವಿನಾಶದತ್ತ ಹೊರಟಿದೆ. ನ್ಯೂಟ್ರಾನ್ ಬಾಂಬ್, ರಸಾಯನಿಕ ವಿಷಾನಿಲ ತುಂಬಿದ ಬಾಂಬ್ ಇವೇ ಮೊದಲಾದ ಅತ್ಯಾಧುನಿಕ ಮಾರಕಾಸ್ತ್ರಗಳ ತಯಾರಿ ಅಮೇರಿಕಾದ ಸೈನ್ಯಗಾರಗಳಲ್ಲಿ ಬಿರುಸಾಗಿ ನಡೆಯುತ್ತಿದೆ. ಮುಂದಿನ ಐದು ವರ್ಷಗಳಲ್ಲಿ 2.5 ಸಾವಿರ ಮಿಲಿಯ ಡಾಲರುಗಳನ್ನು ಮಾರಕ ರಸಾಯನಿಕಾಸ್ತ್ರಗಳ ತಯಾರಿಗಾಗಿ ವ್ಯಯಿಸಲು ರೇಗನ್ ಸರಕಾರ ನಿರ್ಧರಿಸಿದೆ. 1980 ರಲ್ಲಿ ರಸಾಯನಿಕ ಯುದ್ಧ ಸಾಮಾಗ್ರಿ ತಯಾರಿಕೆಯ



ಕಾರ್ಖಾನೆಗಳನ್ನು ಕಟ್ಟಲು 3.15 ಮಿಲಿಯ ಡಾಲರುಗಳನ್ನು ಒದಗಿಸಲು ಅಮೇರಿಕಾದ ಸೆನೆಟ್ ಒಪ್ಪಿಗೆ ನೀಡಿರುತ್ತದೆ. ವಿಷಭರಿತ ಪ್ರಾಣಾಂತಕ ಅನಿಲವನ್ನೊಳಗೊಂಡ ಬಾಂಬಿನ ತಯಾರಿ ಈಗಾಗಲೇ ಆಗಿದ್ದು 1983ರ ವೇಳೆಗೆ ತಿಂಗಳೊಂದರ ಇಂತಹ 20,000 ಗ್ರೆನೇಡುಗಳು ಅಮೇರಿಕಾದ ಯುದ್ಧಗಾರಗಳಿಂದ ಹೊರಬರಲಿವೆ. ಈ ಮಾರಕಾಸ್ತ್ರ ಎಷ್ಟು ಅಪಾಯಕಾರಿ ಎಂದರೆ ಕೇವಲ ಒಂದು ಬಾಂಬ್ 156 ಮಿಲಿಯ ಜನರನ್ನು ಕೊಲ್ಲುವಷ್ಟು ವಿಷಾನಿಲವನ್ನು ಒಳಗೊಂಡಿರುತ್ತದೆ. ವಾತಾವರಣದಲ್ಲಿ ಸೇರಿದ ವಿಷಾನಿಲ ಎಲ್ಲಾ ಜೀವರಾಶಿಗಳನ್ನು ಕೊಂದು ಕೇವಲ ಮಣ್ಣು ಗುಡ್ಡ ಹಾಗು ಕಾರ್ಖಾನೆ ಯಂತ್ರಗಳನ್ನಷ್ಟೇ ಉಳಿಸಬಲ್ಲದು. ಮಾನವ ಕುಲವನ್ನೇ ನಾಶಗೊಳಿಸಿ ಬರೀ ನಿರ್ಜೀವ ಕಾರ್ಖಾನೆಗಳನ್ನು ಉಳಿಸುವ ಅಮೇರಿಕಾದ "ಬಂಡವಾಳಶಾಹಿ" ಬುದ್ಧಿಗೆ ತಲೆದೂಗಲೇಬೇಕು !

ವಿಯೆಟ್ನಾಂ ವಿರುದ್ಧದ ಯುದ್ಧದಲ್ಲಿ ಅಮೇರಿಕಾವು 100,000 ಟನ್ನಿನಷ್ಟು ರಸಾಯನಿಕ ವಿಷಾನಿಲವನ್ನು ದಕ್ಷಿಣ ವಿಯೆಟ್ನಾಂನ ಬಹುತೇಕ ಪ್ರದೇಶಗಳಲ್ಲಿ ಸಿಂಪಡಿಸಿತ್ತು. ಇದರ ಪರಿಣಾಮವಾಗಿ ವಿಯೆಟ್ನಾಂನ ವಿಶಾಲ ಪ್ರದೇಶಗಳಲ್ಲಿ ಕಾಡುಗಳು ನಾಶವಾದವು ಹಾಗು ಅಪಾರ ಆಹಾರ ಪದಾರ್ಥಗಳು ನಷ್ಟಗೊಂಡವು. 2 ಮಿಲಿಯ ಜನತೆ ವಿಷಾನಿಲದಿಂದ ಬಾಧಿಸಲ್ಪಟ್ಟರು. ಇವರುಗಳಲ್ಲಿ ಈವರೆಗೆ 3,500 ಜನರು ಮೃತರಾಗಿರುತ್ತಾರೆ. ಇಂದು ವಿಯೆಟ್ನಾಂ ಮೇಲೆ ಸಿಂಪಡಿಸಲ್ಪಟ್ಟ ವಿಷಾನಿಲ ನಾಳೆ ಇಡೀ ಜಗತ್ತಿನಲ್ಲೆಲ್ಲ ಸಿಂಪಡಿಸಲ್ಪಟ್ಟರೆ ಮಾನವನೂ ಸೇರಿದಂತೆ ಎಲ್ಲಾ ಜೀವ ರಾಶಿಗಳು "ಮೌನ ಸಾವನ್ನು" (Silent Death) ಅನುಭವಿಸಬೇಕಾಗುತ್ತದೆ. ಈ ದುರಂತ ಸಂಭವಿಸುವ ಮೊದಲು ಜಗತ್ತಿನ ಜನ ಎಚ್ಚರಗೊಳ್ಳಬೇಕು. ಸಾಮ್ರಾಜ್ಯಶಾಹಿ ಅಮೇರಿಕಾದ ಯುದ್ಧಕೋರ ನೀತಿಯನ್ನು ಒಮ್ಮತದಿಂದ ಪ್ರತಿಭಟಿಸಬೇಕು.

ಏಸುಕ್ರಿಸ್ತನ ಪುನರುತ್ಥಾನದ ದಿನವನ್ನು ಪ್ರಪಂಚದ ಬಹುತೇಕ ಸ್ಥಳಗಳಲ್ಲಿ ಶಾಂತಿಯ ಪರವಾದ ಹಾಗು ಸಾಮ್ರಾಜ್ಯಶಾಹಿ ಅಮೇರಿಕಾದ ಯುದ್ಧಕೋರ ನೀತಿಯನ್ನು ಪ್ರತಿಭಟಿಸುವ ದಿನವನ್ನಾಗಿ ಆಚರಿಸಲಾದದ್ದು ಜನತೆ ಎಚ್ಚೆತ್ತಿರುವ ಸೂಚನೆಯಾಗಿದೆ. ಪೂರ್ವ ಜರ್ಮನಿ; ಡೆನ್ಮಾರ್ಕ್, ಬ್ರಿಟನ್, ಸ್ವೀಡನ್, ಕೆನಡಾ, ಬರ್ಲಿನ್, ಜಪಾನ್ ದೇಶಗಳಲ್ಲಿ ಈಸ್ಟರ್ ದಿನದಂದು ಲಕ್ಷಾಂತರ ಜನ ಬೀದಿಗಿಳಿದು ಯುದ್ಧ ವಿರೋಧಿ ಘೋಷಣೆ ಕೂಗಿದರು. ಅಮೇರಿಕಾದ ಚಿಕಾಗೋ ನಗರದ 60,000 ವಾಸಿಗರು ಯುದ್ಧಕೋರ ರೇಗನ್ ಸರಕಾರದ ವಿರುದ್ಧ ದೊಡ್ಡ ಪ್ರದರ್ಶನವನ್ನೇ ನಡೆಸಿದರು. ಇವರೊಂದಿಗೆ ಸೇರಿ ಜಗತ್ತಿನ ಎಲಾ ಶಾಂತಿ ಪ್ರಿಯ ಜನತೆ ಒಕ್ಕೊರಳಿನಿಂದ ಅಮೇರಿಕಾದ ಜನ ವಿರೋಧಿ ಧೋರಣೆಯ ವಿರುದ್ಧ ಪ್ರತಿಭಟಿಸಬೇಕು. ಮಾರಕಾಸ್ತ್ರಗಳ ಗುಡಾಣಕ್ಕೆ ತಣ್ಣೀರೆರಚಬೇಕು. ಇಲ್ಲವಾದಲ್ಲಿ ಮಾನವ ಕುಲದ ವಿನಾಶ ಖಂಡಿತ.

ಅಪಾಯದ ಕತ್ತಿ ಅಮೇರಿಕಾದ ರೂಪದಲ್ಲಿ ನಮ್ಮ ನೆತ್ತಿಯ ಮೇಲೆ ತೂಗಾಡುತ್ತಿದೆ. ಇದನ್ನರಿತೂ ನಾವು ಮೌನವಹಿಸಿದರೆ ನಮ್ಮ ಸಾವಿಗಿಂತ ಮಿಗಿಲಾಗಿ ಚರಿತ್ರೆ ನಮ್ಮನ್ನು ಕ್ಷಮಿಸದು. ಸುಖೀ ಸಮಾಜ ರಚನೆಗಾಗಿ ಪ್ರಪಂಚದಾದ್ಯಂತ ಹೋರಾಡುತ್ತಿರುವ

(8ನೇ ಪುಟ ನೋಡಿ)

ಮೈಸೂರು :

ನಗರ ಕಾರ್ಪೊರೇಷನ್ ಕಾರ್ಮಿಕರ ಹೋರಾಟದ ನಿರ್ಧಾರ

ಸುಮಾರು 900 ರಷ್ಟಿರುವ ಮೈಸೂರು ನಗರ ಕಾರ್ಪೊರೇಶನ್ ಕಾರ್ಮಿಕರು 12 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಕಮಿಷನರ್‌ರವರಿಗೆ ಸಲ್ಲಿಸಿದ್ದು, ಈ ಬೇಡಿಕೆಗಳನ್ನು ಈಡೇರಿಸಬೇಕೆಂದುಒತ್ತಾಯಿಸಿ 30-6-82 ರಿಂದ ಸರದಿ ಧರಣಿ ಸತ್ಯಾಗ್ರಹ ನಡೆಸಿದ್ದಾರೆ. 23-6-82 ರಂದು ಇಲ್ಲಿ ಸಭೆ ಸೇರಿದ್ದ ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯಿಸ್ ಯೂನಿಯನ್ (ಸಿ. ಐ. ಟಿ. ಯು) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು.

ಪೌರ ಕಾರ್ಮಿಕರಿಗೆ ಈ ಹಿಂದೆ ಆದ ಒಪ್ಪಂದದಂತೆ 600 ಸೈಟುಗಳನ್ನು ಕೂಡಲೇ ಕೊಡಬೇಕು, ಬಾಕಿ ಉಳಿದಿರುವ ಮೆಡಿಕಲ್ ಮತ್ತು ವಾಶಿಂಗ್ ಅಲೋವೆನ್ಸ್, 7 ಗಂಟೆಗಳ ಕೆಲಸದ ಅವಧಿ, ಪೌರ ಕಾರ್ಮಿಕರ ಕ್ವಾರ್ಟರ್ಸ್‌ಗಳಿಗೆ ವಿದ್ಯುತ್‌ಶಕ್ತಿ, ದೀಪದ ವ್ಯವಸ್ಥೆ, ಜನ ಸಂಖ್ಯೆಯ 500ಕ್ಕೆ ಓರ್ವ ಪೌರ ಕಾರ್ಮಿಕರನ್ನು ನೇಮಿಸಬೇಕೆಂಬ ಸಾಲಪ್ಪ ಸಮಿತಿ ತೀರ್ಮಾನದ ಜಾರಿ, ಹಂಗಾಮಿ ಕೆಲಸಗಾರರನ್ನು ಖಾಯಂಗೊಳಿಸುವುದು, ಹಂಗಾಮಿ ಕೆಲಸಗಾರರ ವೇತನವನ್ನು ರೂ. 150 ರಿಂದ ರೂ. 300ಕ್ಕೆ ಏರಿಸುವುದು, 2 ವರ್ಷಗಳಿಂದ ಪೌರ ಕಾರ್ಮಿಕರಿಗೆ ಪಾದರಕ್ಷೆಗಳನ್ನು ಕೊಡದೇ ಇದ್ದು ಇದನ್ನು ಕೂಡಲೇ ಒದಗಿಸುವುದು, ಪೌರ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿರುವ ಕೇರಿಗಳಲ್ಲಿ ಅವರುಗಳ ಮಕ್ಕಳಿಗೆ ವಿದ್ಯಾಭ್ಯಾಸ ಪಡೆಯಲು ಅನುಕೂಲವಾಗುವಂತೆ ಪ್ರಾಥಮಿಕ ಶಾಲೆಗಳನ್ನು, ಹಾಸ್ಟೆಲುಗಳನ್ನು ಒದಗಿಸುವುದು, ಆರೋಗ್ಯ ಕೇಂದ್ರಗಳನ್ನು ಒದಗಿಸುವುದು—ಇವೇ ಮೊದಲಾದ ಬೇಡಿಕೆಗಳನ್ನು ಪೌರ ಕಾರ್ಮಿಕರು ಮಂಡಿಸಿದ್ದಾರೆ. ಬೇಡಿಕೆಗಳು ಈಡೇರುವವರೆಗೆ ಹೋರಾಡಲು ನಿರ್ಧರಿಸಿದ್ದಾರೆ.

ಜಾವಾ ಕಾರ್ಮಿಕರಿಗೆ ಬೆಂಬಲ:

ಸುಮಾರು 2500 ಕಾರ್ಮಿಕರಿರುವ ಮೈಸೂರಿನ ಐಡಿಯಲ್ ಜಾವಾ ಕಾರ್ಖಾನೆಗೆ ಬೀಗ ಮುದ್ರೆ ಜಡಿಯಲ್ಪಟ್ಟಿದ್ದು ಕಾರ್ಮಿಕರು ಈ ಅನ್ಯಾಯವನ್ನು ಪ್ರತಿಭಟಿಸಿ ಹೋರಾಡುತ್ತಿದ್ದಾರೆ. ಮೈಸೂರು ನಗರ ಕಾರ್ಪೊರೇಷನ್ ಎಂಪ್ಲಾಯಿಸ್ ಯೂನಿಯನ್ ಜಾವಾ ಕಾರ್ಮಿಕರ ಹೋರಾಟಕ್ಕೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ಉಡುಪಿ ನೆರೆ ಸಂತ್ರಸ್ತರಿಗೆ ನೆರವು :

ಉಡುಪಿಯಲ್ಲಿ ಇತ್ತೀಚಿಗೆ ಸಂಭವಿಸಿದ ನೆರೆ ದುರಂತದಲ್ಲಿ ಮೃತರಾದ ಕುಟುಂಬಗಳಿಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿದ ಪೌರ ಕಾರ್ಮಿಕರ ಸಂಘವು ಸಿ. ಐ. ಟಿ. ಯು. ಕರೆಯ ಮೇರೆಗೆ ನೆರೆ ಸಂತ್ರಸ್ತರಿಗೆ ರೂ. 201ನ್ನು ನೀಡಿ ನೆರವಾಗಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕಾಂ। ಎಂ.ಎಸ್. ಉಗ್ರಪ್ಪನವರು ವಹಿಸಿದ್ದರು. ಕಾರ್ಯದರ್ಶಿ ಕಾಂ। ಸಿ. ಕೆ. ಮೋನ್ ಚಟುವಟಿಕೆಯ ವರದಿ ನೀಡಿದರು.

ಧಾರವಾಡದ ಪ್ಲೈವುಡ್ ಕಾರ್ಖಾನೆಯಲ್ಲಿ–

ವೇತನ ಒಪ್ಪಂದ

ಧಾರವಾಡದ ಇಂಡಿಯನ್ ಪ್ಲೈವುಡ್ ಕಾರ್ಮಿಕ ಸಂಘ ಹಾಗೂ ಆಡಳಿತ ವರ್ಗದ ನಡುವಿನ ಹಳೆಯ ಒಪ್ಪಂದ 23-5-82 ರಂದು ಮುಗಿದು ಅದಕ್ಕೆ ಪೂರ್ವಭಾವಿಯಾಗಿ 13-2-82 ರಂದು ಕಾರ್ಮಿಕ ಸಂಘವು ಆಡಳಿತ ವರ್ಗಕ್ಕೆ ಬೇಡಿಕೆಗಳ ಪಟ್ಟಿಯನ್ನು ಒಪ್ಪಿಸಿತು.

ಈ ಬೇಡಿಕೆಗಳ ಕುರಿತು ಸುದೀರ್ಘ ಮಾತುಕತೆ ನಡೆದು ಜೂನ್ ತಿಂಗಳಿನಲ್ಲಿ ವೇತನ ಒಪ್ಪಂದಕ್ಕೆ ಬರಲಾಗಿದೆ. ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಸಂಘದ ಉಪಾಧ್ಯಕ್ಷ ಕಾಂ। ಎಂ. ಬಿ. ಕಟ್ಟಿ ಹಾಗೂ ಕಾಂ। ಪರಪ್ಪನವರು ಮತ್ತು ಸಂಘದ ಕಾರ್ಯಕಾರೀ ಸಮಿತಿ ಸದಸ್ಯರು ಸಹಿ ಹಾಕಿದ್ದಾರೆ.

ಒಪ್ಪಂದದ ವಿವರಗಳು :

(1) ಒಂದನೇ ವರ್ಷದಲ್ಲಿ;

(ಎ) 5 ವರ್ಷ ಸರ್ವೀಸ್ ಆದ ಪ್ರತಿ ಕಾರ್ಮಿಕರಿಗೆ ಪ್ರತಿ ತಿಂಗಳೂ 30 ರೂ.

(ಬಿ) 5 ರಿಂದ 10 ವರ್ಷ ಸರ್ವೀಸ್ ಆದ ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳೂ 40 ರೂ.

(ಸಿ) 10 ರಿಂದ 15 ವರ್ಷ ಸರ್ವೀಸ್ ಆದ ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳೂ 50 ರೂ.

(2) ಎರಡನೇ ವರ್ಷದಲ್ಲಿ ಪ್ರತಿ ತಿಂಗಳೂ 20 ರೂ.ಗಳಂತೆ ಎಲ್ಲರಿಗೂ ಸಮನಾಗಿ ಹೆಚ್ಚಳ.

ಹಾಗೂ ಇನ್‌ಕ್ರಿಮೆಂಟಿನಲ್ಲೂ ಹೆಚ್ಚಿಗೆಯಾಗಿದೆ.

ಇತ್ತೀಚಿಗೆ ರೂ. 9-40 (ದಿನವೊಂದಕ್ಕೆ) ರಂತೆ ಪ್ಲೈವುಡ್ ಉದ್ಯಮದಲ್ಲಿ ಕಾರ್ಮಿಕರಿಗೆ ನಿಗದಿಪಡಿಸಿ ಕರ್ನಾಟಕ ಸರಕಾರ ಕನಿಷ್ಠ ವೇತನ ಜ್ಯಾರಿ ಮಾಡಿತ್ತು. ಆಡಳಿತ ವರ್ಗದವರು ಹೈಕೋರ್ಟ್ ಮೊರೆ ಹೊಕ್ಕದ್ದರಿಂದ 50% ಸ್ಟೇ ಸಿಕ್ಕಿತ್ತು.

ಆದಾಗ್ಯೂ ಇಲ್ಲಿಯ ಕಾರ್ಮಿಕರು ತಮ್ಮ ಸಂಘಟನಾ ಶಕ್ತಿಯಿಂದ ಹೆಚ್ಚು ವೇತನ ಪಡೆದಿದ್ದು ಇಲ್ಲಿಯ ಕಾರ್ಮಿಕನ ಕನಿಷ್ಟ ವೇತನ ದಿನಕ್ಕೆ 8-90 ಪೈಸೆ ಆದಂತಾಗಿದೆ.

ಸಮಾಜವಾದೀ ಅಭಿವೃದ್ಧಿಯ ನಿಯಮಗಳನ್ನು ಕುರಿತು

—ಇ. ಎಂ. ಎಸ್.

ಎರಡನೇ ಮಹಾ ಯುದ್ಧಾನಂತರ ಸಮಾಜವಾದೀ ಜಗತ್ತು ವಿಸ್ತರಿಸುತ್ತಿದೆ, ಸತತ ಪ್ರಗತಿ ಸಾಧಿಸುತ್ತಿದೆ. ಅಲ್ಲಿಯ ಜನಜೀವನದಲ್ಲಿ ಗುಣಾತ್ಮಕ ಬದಲಾವಣೆಗಳುಂಟಾಗಿವೆ. ಆದ್ದರಿಂದ ನಿಷ್ಪಕ್ಷವಾಗಿ ಯೋಚಿಸುವ ಯಾರಿಗೇ ಆಗಲಿ ಸಮಾಜವಾದೀ ವ್ಯವಸ್ಥೆ ಬಂಡವಾಳಶಾಹೀ ವ್ಯವಸ್ಥೆಗಿಂತ ಶ್ರೇಷ್ಠ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇತ್ತ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಆಗಾಗ ಸಂಭವಿಸುತ್ತಿದ್ದ ಆವರ್ತ ಬಿಕ್ಕಟ್ಟು ಈಗ ಸಾರ್ವತ್ರಿಕ ರೂಪ ಪಡೆದು ಆರ್ಥಿಕ ವ್ಯವಸ್ಥೆಯನ್ನು ಮಾತ್ರವಲ್ಲ ಬಂಡವಾಳಶಾಹೀ ದೇಶಗಳ ಜೀವನದ ಎಲ್ಲಾ ರಂಗಗಳನ್ನು ವ್ಯಾಪಿಸುತ್ತಿದೆ. ಇದರಿಂದ ಬಂಡವಾಳಶಾಹಿಯ ವಕ್ತಾರರು ಹಾಗೂ ನಮ್ಮಂತಹ ದೇಶಗಳಲ್ಲಿರುವ ಅವರ ಹಿಂಬಾಲಕರು ಹಾಗೂ ಸಮರ್ಥಕರು ಗಲಿಬಿಲಿಗೊಂಡಿದ್ದಾರೆ. ತಮ್ಮ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳಲಾಗದ ಅವರು ಸಮಾಜವಾದೀ ವ್ಯವಸ್ಥೆ ಕೂಡಾ ಬಿಕ್ಕಟ್ಟಿನಲ್ಲಿದೆ ಎಂದು ಜನರನ್ನು ನಂಬಿಸಲು ಪ್ರಯತ್ನಿಸುತ್ತಿದ್ದಾರೆ.

ತಿರುವನಂತಪುರದ ಎ. ಕೆ. ಜಿ. ಸಂಶೋಧನಾ ಕೇಂದ್ರ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಇ. ಎಂ. ಎಸ್. ನಂಬೂದಿರಿಪಾಡ್ ತಾವು ಮಂಡಿಸಿದ 'ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟು' ಎಂಬ ಪ್ರಬಂಧದಲ್ಲಿ ಸಾಂದರ್ಭಿಕವಾಗಿ ಇದನ್ನು ವಿಶ್ಲೇಷಿಸಿದ್ದಾರೆ. ಅವರ ದೀರ್ಘ ಪ್ರಬಂಧದ ಈ ಭಾಗವನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ.

ಸಮಾಜವಾದೀ ಸಮಾಜದ ರಚನೆಯ ಕೆಲಸ ಸುಲಭ ಅಥವಾ ಸುಗಮವಾದುದೇನೂ ಅಲ್ಲ. ಪ್ರಭುತ್ವ ಯಂತ್ರವನ್ನು ಕಾರ್ಮಿಕ ವರ್ಗ ತನ್ನ ಕೈವಶ ಮಾಡಿಕೊಂಡರಷ್ಟೇ ಸಮಾಜವಾದೀ ಕ್ರಾಂತಿ ಮುಗಿಯುವುದಿಲ್ಲ. ಅದಿನ್ನೂ ಸಮಾಜವಾದೀ ಕ್ರಾಂತಿಯ ಆರಂಭವಷ್ಟೆ. ಅನಂತರ ಸಮಗ್ರ ಅರ್ಥವ್ಯವಸ್ಥೆಯನ್ನು, ರಾಜಕೀಯ ಆಡಳಿತ ವ್ಯವಸ್ಥೆಯನ್ನು ಪುನರ್ರಚಿಸಬೇಕು. ಜನತೆಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಜೀವನವನ್ನು ಆಧುನಿಕರಿಸಿ ಅದನ್ನು ಕಾರ್ಮಿಕ ವರ್ಗದ ಪಕ್ಷಪಾತಿಯಾಗಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ರಚನೆಯ ಕೆಲಸದಲ್ಲಿ ತೊಡಗಿರುವ ಮಾನವ ವ್ಯಕ್ತಿತ್ವವನ್ನು ಪುನರ್ರೂಪಿಸಬೇಕು. ಇವೆಲ್ಲಾ ಆಗಬೇಕಾದರೆ ಬಂಡವಾಳಶಾಹೀ ದೇಶಗಳಿಂದ ಬರುವ ಬೂರ್ಜ್ವಾ ಸಿದ್ಧಾಂತ, ಬೂರ್ಜ್ವಾ ಜೀವನ ಕ್ರಮ ಇತ್ಯಾದಿಗಳ ವಿರುದ್ಧ ಸತತ ಹೋರಾಟವನ್ನು ಸಮಾಜವಾದೀ ದೇಶದ ಪ್ರಭುತ್ವ ಹಾಗೂ ಪಕ್ಷದ ನಾಯಕರು ನಡೆಸಬೇಕು. ಇನ್ನೂ ಬಂಡವಾಳಶಾಹಿಯ ಆಧಿಪತ್ಯದಲ್ಲಿರುವ ಜಗತ್ತಿನಲ್ಲಿ ಬೂರ್ಜ್ವಾ ಸಿದ್ಧಾಂತ ಹಾಗೂ ರಾಜಕೀಯ ಸಮಾಜವಾದೀ ದೇಶಗಳ ಸರಕಾರ ಹಾಗೂ ನಾಯಕರ ನಡುವೆ ತೂರಿಕೊಳ್ಳಲು ಸಾಧ್ಯವಿಲ್ಲ ಎಂದು ನಂಬುವುದು ಭೋಳೆತನವಾದೀತು.

ಇತ್ತೀಚೆಗೆ ಪೋಲೆಂಡ್‌ನಲ್ಲಿನ ಘಟನೆಗಳು ಇದಕ್ಕೆ ಒಳ್ಳೆಯ ಉದಾಹರಣೆ. ಅದರ ಮೊದಲು ಚೀನಾದಲ್ಲಿನ ಏಳು-ಬೀಳು, 1968ರ ಜೆಕೋಸ್ಲೋವಾಕಿಯಾ, 1958ರ ಹಂಗೇರಿ ಹಾಗೂ ಪೋಲಂಡ್ ಸಮಾಜವಾದೀ ಬೆಳವಣಿಗೆಯಲ್ಲಿ ತನ್ನದೇ ಆದ ಸಮಸ್ಯೆಗಳಿವೆ. ಅದನ್ನು ಆಯಾಯ ಸಂದರ್ಭದಲ್ಲಿ ಪರಿಹರಿಸದಿದ್ದರೆ ನಂತರ ಬಿಕ್ಕಟ್ಟಿನ ಸ್ಥಿತಿ ಏರ್ಪಡಬಹುದು ಎಂದು ತೋರಿಸಿಕೊಟ್ಟಿವೆ.

ಸೋವಿಯೆತ್ ಸಂಘದಲ್ಲೂ ಹಲವು ಗಂಭೀರ ಸಮಸ್ಯೆಗಳಿದ್ದವು. ಪ್ರಾರಂಭದ ದಿನಗಳಲ್ಲಿ ಮಾತ್ರವಲ್ಲ, ಸಮಾಜವಾದೀ ವ್ಯವಸ್ಥೆ ದೃಢಗೊಂಡ ಮೇಲೂ ಇವು ಇದ್ದವು. ಬೇಸಾಯದ ಸಮೂಹೀಕರಣ, ಅರ್ಥ ವ್ಯವಸ್ಥೆಯ ತೀವ್ರಗತಿಯ ಕೈಗಾರಿಕೀಕರಣ, ದೇಶದ ಸಾಂಸ್ಕೃತಿಕ ಜೀವನದಲ್ಲಾದ ಕ್ರಾಂತಿಕಾರಿ ಬದಲಾವಣೆಗಳು ಇತ್ಯಾದಿಗಳಿಂದಾಗಿ ಸೋವಿಯೆತ್ ನಾಯಕತ್ವಕ್ಕೆ ಶಕ್ತಿಶಾಲಿ ಕೆಂಪು ಸೇನೆಯನ್ನು ಕಟ್ಟಿ ನಾಝೀ ಮಂದೆಗಳನ್ನು ಸೋಲಿಸಲು ಸಾಧ್ಯವಾಯಿತು. ಆದರೆ ಆನಂತರ ಮೂಡಿಬಂತೆನ್ನಲಾದ ಸ್ಟಾಲಿನ್ ವ್ಯಕ್ತಿ ಪೂಜೆ, ಅದರ ವಿರುದ್ಧ ಕ್ರುಶ್ಚೋವ್‌ರ ಕಾಲದಲ್ಲಿ ಹೋರಾಟ ನಡೆಸಿದ ರೀತಿ ಮತ್ತು ತದನಂತರದ ಬೆಳವಣಿಗೆಗಳು ಇವೆಲ್ಲಾ ಕಾರ್ಮಿಕ ವರ್ಗದ ಪಕ್ಷವೊಂದು ಜಯಶಾಲಿಯಾದ ಮೇಲೆ ವಿವಿಧ ರೀತಿಯಲ್ಲಿ ದಾರಿ ತಪ್ಪುವುದರ ಅಪಾಯದ ಬಗ್ಗೆ ಬಹಳ ಎಚ್ಚರದಿಂದಿರಬೇಕೆಂಬುದನ್ನು ಮನದಟ್ಟು ಮಾಡಿಸುತ್ತಿವೆ. ಇದು ಮಾರ್ಕ್ಸ್‌ವಾದ-ಲೆನಿನ್‌ವಾದದ ಮುಖ್ಯ ಪಾಠ.

ಸಮಾಜವಾದೀ ಅಭಿವೃದ್ಧಿಯ ನಿಯಮಗಳು

ರಶಿಯನ್ ಕ್ರಾಂತಿಯ ನಂತರ ಆರೂವರೆ ದಶಕಗಳ ಕಾಲ ಇಂತಹ ತಪ್ಪು ದಾರಿಗಳ ವಿರುದ್ಧ ಹೋರಾಟದ ಅನುಭವದ ನೆರವಿಗೆ ಈಗ ಒಂದು ನಿರ್ಣಯತೆ ಬರಲು ಸಾಧ್ಯವಾಗಿದೆ. ಅದೆಂದರೆ ಸಮಾಜವಾದೀ ಬೆಳವಣಿಗೆಗೆ ಕೆಲವು ನಿರ್ದಿಷ್ಟ ನಿಯಮಗಳಿವೆ. ಅದನ್ನು ಉಲ್ಲಂಘಿಸಿದರೆ ಸಮಾಜವಾದೀ ಸಮಾಜದ ಅರ್ಥವ್ಯವಸ್ಥೆ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಕೆಲವು ವಿಕೃತಿಗಳುಂಟಾಗಬಹುದು. ಈ ಯಾವುದಾದರೊಂದು ನಿಯಮದ, ಕೆಲವೊಂದು ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚು ನಿಯಮಗಳ ಉಲ್ಲಂಘನೆಯಿಂದಾಗಿ ಒಂದಲ್ಲ ಒಂದು ಸಮಾಜವಾದೀ ದೇಶದಲ್ಲಿ ಒಂದಿಲ್ಲೊಂದು ಸಂದರ್ಭದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗಬಹುದು. ಹಾಗೆ ಬಿಕ್ಕಟ್ಟು ಉಂಟೂ ಆಗಿದೆ. ಆ ನಿಯಮಗಳನ್ನು ಸಾರಾಂಶ ರೂಪದಲ್ಲಿ ಹೀಗೆ ಹೇಳಬಹುದು

ಮೊದಲನೆಯದಾಗಿ, ಮಾನವತೆಯ ಸಾಗರದಲ್ಲಿ ಸಮಾಜವಾದೀ ಜಗತ್ತು ಒಂದು ದ್ವೀಪವೇನಲ್ಲ. ಅದು ಬಂಡವಾಳಶಾಹೀ ಜಗತ್ತಿನೊಂದಿಗೆ ಸಹ ಅಸ್ತಿತ್ವ ಹೊಂದಿರಬೇಕಾಗಿದೆ. ಹೀಗಿರುವಾಗ ಬಂಡವಾಳಶಾಹೀ ಜಗತ್ತಿನ ಮೇಲೆ ಸಮಾಜವಾದ ಪ್ರಭಾವ ಬೀರುವಂತೆ ಬಂಡವಾಳಶಾಹೀ ಜಗತ್ತಿನ ಪ್ರಭಾವವನ್ನೂ ಅದು ಎದುರಿಸಬೇಕಾಗುತ್ತದೆ.

ಉದಾಹರಣೆಗೆ, ಬಂಡವಾಳಶಾಹೀ ಜಗತ್ತಿನಲ್ಲಿನ ಹಣದುಬ್ಬರದ ಬಿಸಿ ಸಮಾಜವಾದೀ ಜಗತ್ತಿಗೂ ತಟ್ಟದಿರಲು ಸಾಧ್ಯವಿಲ್ಲ. ಸಮಾಜವಾದೀ ಯೋಜನಾಕ್ರಮ ಈ ಪರಿಣಾಮವನ್ನು ಬಹಳಷ್ಟು ಸೀಮಿತಗೊಳಿಸಿದೆ ಎಂಬುದು ಬೇರೆ ಮಾತು. ಇಷ್ಟೇ ಅಲ್ಲ, ವಿಸ್ತರಿಸುತ್ತಿರುವ, ಅಭಿವೃದ್ಧಿ ಹೊಂದುತ್ತಿರುವ ಸಮಾಜವಾದೀ ಜಗತ್ತಿನ ಮಾರುಕಟ್ಟೆಗಳು ಬಂಡವಾಳಶಾಹೀ ಜಗತ್ತಿನ ಹೆಚ್ಚುವರಿ ಉತ್ಪಾದನೆಗಳಿಗೆ ಅವಕಾಶ ನೀಡಿ, ಅವರ ಕಾರ್ಮಿಕರಿಗೆ ಉದ್ಯೋಗಾವಕಾಶ ಉಂಟಾಗುವಂತೆ ಮಾಡಿ ಬಂಡವಾಳಶಾಹೀ ದೇಶಗಳಿಗೆ ಆಸರೆಯಾಗಿ ನಿಲ್ಲಬಹುದು. ಇದರ ಪರಿಣಾಮ ಎರಡು ರೀತಿಗಳಲ್ಲಾಗಬಹುದು. ಒಂದು, ಇಂತಹ ದೇಶಗಳ ತೀವ್ರಗಾಮಿ ಶಕ್ತಿಗಳು, ಕಾರ್ಮಿಕರು ಹಾಗೂ ಅವರ ಪಕ್ಷ ಸರಿಯಾಗಿ ಯೋಜಿತ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ ತಮ್ಮ ದೇಶಗಳ ಸರಕಾರಗಳ ಮೇಲೆ ಮಿಲಿಟರಿ ವೆಚ್ಚ ತಗ್ಗಿಸಲು, ಗುತ್ತೇದಾರಿ ವಿರೋಧೀ ಧೋರಣೆ ವಹಿಸುವಂತೆ ಒತ್ತಡ ತರಲು ಸಾಧ್ಯ. ಅಥವಾ, ಎರಡನೆಯದಾಗಿ, ಸಮಾಜವಾದೀ ದೇಶಗಳ ಪ್ರಭುತ್ವ ಹಾಗೂ ಪಕ್ಷ ಸದಾ ಎಚ್ಚರದಿಂದಿಲ್ಲದಿದ್ದರೆ ಬಂಡವಾಳಶಾಹೀ ದೇಶಗಳ ಮಿಲಿಟರಿ ಕೈಗಾರಿಕಾ ವಲಯಗಳಿಗೆ ಸಮಾಜವಾದೀ ದೇಶಗಳ ಮೇಲೆ ದಾಳಿ ಮಾಡಲು ನೆರವಾದಂತಾಗಬಹುದು.

ಈ ರೀತಿ ಲಾಭಕರ ವ್ಯಾಪಾರೀ ಸಹಕಾರ ನಡೆಸುವುದರೊಂದಿಗೆ ಮೇಲೆ ತಿಳಿಸಿದಂತಹ ಅಪಾಯದ ಬಗ್ಗೆ ಎಚ್ಚರದಿಂದಿರುವ ಧೋರಣೆಯನ್ನು ನಿರ್ವಹಿಸುವುದು ತುಂಬಾ ಕ್ಲಿಷ್ಟಕರ ಪ್ರಕ್ರಿಯೆ. ಪ್ರತಿಯೊಂದು ಸಮಾಜವಾದೀ ದೇಶದ ನಾಯಕತ್ವ ಈ ಪ್ರಕ್ರಿಯೆಯ ಪಾಠಗಳನ್ನು ಸಂಪೂರ್ಣವಾಗಿ ಕರಗತ ಮಾಡಿಕೊಳ್ಳಬೇಕು. ಜಾಗತಿಕ ಕಮ್ಯುನಿಸ್ಟ್ ಚಳವಳಿಯ ವಿವಿಧ ವಿಭಾಗಗಳು, ಸಮಾಜವಾದೀ ಜಗತ್ತಿನ ವಿವಿಧ ವಿಭಾಗಗಳು ಈ ಪ್ರಕ್ರಿಯೆಯನ್ನು ವಿಭಿನ್ನ ರೀತಿಯಲ್ಲಿ ಗ್ರಹಿಸಿಕೊಂಡದ್ದರಿಂದ ಸ್ವಾಭಾವಿಕವಾಗಿಯೇ ತಿಕ್ಕಾಟ ಸಂಭವಿಸಿದೆ.

ಎರಡನೇಯದಾಗಿ, ಆರ್ಥಿಕ ಯೋಜನಾ ಪದ್ಧತಿ ಸಮತೂಕದ ಹಾಗೂ ಪ್ರಮಾಣಬದ್ಧ ಅಭಿವೃದ್ಧಿಯ ನೀತಿಗೆ ಅನುಗುಣವಾಗಿರಲೇಬೇಕು. ಅಂದರೆ ಸಣ್ಣ ಹಾಗೂ ಭಾರೀ ಕೈಗಾರಿಕೆ, ಕೈಗಾರಿಕೆ ಮತ್ತು ಕೃಷಿ, ಪಟ್ಟಣ ಮತ್ತು ಹಳ್ಳಿ, ಶೇಖರಣೆ ಹಾಗೂ ಬಳಕೆ, ಭೌತಿಕ ಜೀವನ ಹಾಗೂ ಸಾಂಸ್ಕೃತಿಕ ಜೀವನ ಹೀಗೆ ಎಲ್ಲಾ ವಿಷಯಗಳ ಬಗ್ಗೆ ಸಮತೂಕದ ದೃಷ್ಟಿಯಿರಬೇಕು. ಈ ಸಮತೋಲನದಲ್ಲಿ ಅಥವಾ ಅವುಗಳ ಪ್ರಮಾಣದಲ್ಲಿ ಏರುಪೇರಾದರೆ ಸಮಸ್ಯೆಗಳುಂಟಾಗುತ್ತವೆ. ಮುಂದೆ ಅವು ಬಿಕ್ಕಟ್ಟಿನ ಪರಿಸ್ಥಿತಿ ತಲುಪುತ್ತವೆ. ಇದೇ ರೀತಿ ಬಂಡವಾಳಶಾಹೀ ದೇಶಗಳಿಂದ ನಡೆಯಬಹುದಾದ ಬಹಳ ಮುಂದುವರಿದ ತಂತ್ರಜ್ಞಾನ ಹಾಗೂ ಬಂಡವಾಳ ಒಂದೆಡೆ, ಸಮಾಜವಾದೀ ಆರ್ಥಿಕತೆಯ ಸ್ವಾವಲಂಬನೆ ಇನ್ನೊಂದೆಡೆ, ಇವೆರಡರ ನಡುವೆಯೂ ಸಮತೋಲನ ಕಾದುಕೊಳ್ಳಬೇಕು.

ಮೂರನೇಯದಾಗಿ, ಸಮಾಜವಾದೀ ಅಭಿವೃದ್ಧಿಯ ದೀರ್ಘಕಾಲೀನ ದೃಷ್ಟಿ, ಹೇಗಿರಬೇಕೆಂದರೆ, ಜಮೀನೂ ಸೇರಿದಂತೆ ಎಲ್ಲಾ ಉತ್ಪಾದನಾ ಸಾಧನ, ಸಾಮುಗ್ರಿಗಳನ್ನು ಹಂತಹಂತವಾಗಿ ರಾಷ್ಟ್ರೀಕರಿಸುವ, ಸಮೂಹೀಕರಿಸುವ ಹಾಗೂ ಸಾಮಾಜಿಕ ಹತೋಟಿಗೊಳಪಡಿಸುವ ನೀತಿಯ ಮೇಲೆ ಅದು ಆಧಾರಿತವಾಗಿರಬೇಕು. ಈ ದಿಸೆಯಲ್ಲಿ ಆಸ್ತಿ ಸಂಬಂಧಗಳನ್ನು ಬದಲಿಸಲು ಕೃತಕ, ಯಾಂತ್ರಿಕ ಹಾಗೂ ಆಡಳಿತಶಾಹೀ ವಿಧಾನ ಅನುಸರಿಸಿದರೆ ಅದರಿಂದ ಶ್ರಮಜೀವಿಗಳಲ್ಲಿ ಗಣನೀಯ ವಿಭಾಗ ಪಕ್ಷದ ನಾಯಕತ್ವದ ಮೇಲೆ ತಿರುಗಿ ಬೀಳುವ ಸಂಭವವಿರುತ್ತದೆ. ಹೀಗಾಗದಂತೆ ಎಚ್ಚರ ವಹಿಸಿ ಸುಯೋಜಿತ ರೀತಿಯಲ್ಲಿ ಈ ಆರ್ಥಿಕ ಕ್ರಮವನ್ನು ಕಾರ್ಯಗತಗೊಳಿಸಬೇಕು. ಈ ಕ್ರಮ ಕೈಗೊಳ್ಳದಿದ್ದರೆ ಬೇರೆ ಯಾವುದೇ ರೀತಿಯ ಸಮಾಜವಾದೀ ಯೋಜನೆ ಸಾಧ್ಯವೇ ಇಲ್ಲ.

ನಾಲ್ಕನೇಯದಾಗಿ, ಪರಕೀಯ ವರ್ಗ ಸಿದ್ಧಾಂತಗಳ ದುಷ್ಪರಿಣಾಮಗಳ ವಿರುದ್ಧ ಹೋರಾಡಬೇಕಾದ ತನ್ನ ಪರಮ ಕರ್ತವ್ಯವನ್ನು ಪ್ರಭುತ್ವ ಹಾಗೂ ಪಕ್ಷದ ನಾಯಕತ್ವ ಎಂದೂ ನಿರ್ಲಕ್ಷಿಸಬಾರದು. ಪರಕೀಯ ವರ್ಗ ಸಿದ್ಧಾಂತಗಳು ವಿವಿಧ ರೂಪಗಳಲ್ಲಿ ತಮ್ಮ ಪ್ರಭಾವ ಬೀರುತ್ತವೆ. ಜನಮಾನಸದ ಮೇಲೆ ಮತಧರ್ಮಗಳ ಕಪಿಮುಷ್ಟಿ ಅವುಗಳಲ್ಲೊಂದು. ಯಾವುದೇ ಧಾರ್ಮಿಕ ಗುಂಪಿನ ಪುರೋಹಿತಶಾಹಿಯ ಕೆಳ ಹಾಗೂ ಮಧ್ಯದ ಹಂತಗಳಿಗೆ ಸೇರಿದವರು ಸಮಾಜವಾದ ಕಟ್ಟುವ ಕೆಲಸದಲ್ಲಿ ಕ್ರಾಂತಿಕಾರೀ ಶಕ್ತಿಗಳ ಜೊತೆಗೂಡುವ ಸಂಭವವಿರುವುದರಿಂದ ಧಾರ್ಮಿಕ ಸಂಸ್ಥೆಗಳ ಬಗ್ಗೆ ಪಂಥವಾದೀ ನಿಲುವು ತಳೆಯಬಾರದು. ಅದೇ ಸಮಯದಲ್ಲಿ ಪುರೋಹಿತಶಾಹಿ ಜನತೆಯನ್ನು ತನ್ನ ಬಿಗಿ ಹಿಡಿತಕ್ಕೆ ಸಿಲುಕಿಸಿ ಅವರನ್ನು ಸಮಾಜವಾದೀ ರಚನೆಯ ವಿರುದ್ಧ ಉಪಯೋಗಿಸಲು ಪ್ರಯತ್ನಿಸಲು ಅವಕಾಶವಾಗದಂತೆ ಸದಾ ಎಚ್ಚರ ವಹಿಸಬೇಕು. ಈ ಎರಡೂ ದಿಸೆಯಲ್ಲಿ ತಪ್ಪುಗಳಾಗಲು ಸಾಧ್ಯವಿದೆಯೆಂದು ಕಳೆದ ಆರು ದಶಕಗಳ ಸಮಾಜವಾದೀ ರಚನೆಯ ಅನುಭವದಿಂದ ನಾವು ತಿಳಿದಿದ್ದೇವೆ. ಆದ್ದರಿಂದ ಇವೆರಡೂ ತಪ್ಪು ದಾರಿಗಳ ವಿರುದ್ಧ ಹೋರಾಡಬೇಕು.

ಎಲ್ಲಕ್ಕೂ ಮಿಗಿಲಾಗಿ, ಕಾರ್ಮಿಕ ವರ್ಗದ ಪಕ್ಷ ತನ್ನ ಮುಂದಾಳುತ್ವದ ಪಾತ್ರವನ್ನು ಸರಿಯಾಗಿ ನಿಭಾಯಿಸದಿದ್ದರೆ, ಪ್ರಜಾ ತಾಂತ್ರಿಕ ಕೇಂದ್ರವಾದದ ನಿಯಮಗಳನ್ನು ಪಾಲಿಸದಿದ್ದರೆ ಸಮಾಜವಾದ ಕಟ್ಟುವುದು ದುಸ್ಸಾಧ್ಯ. ಜನತೆಯ ಮೇಲೆ ಪಕ್ಷದ ಮುಂದಾಳ್ತನದ ಪಾತ್ರವೆಂದರೆ, ಪಕ್ಷ ಜನಸಾಮಾನ್ಯರ ಜತೆಯಿರಬೇಕು. ಆದರೆ ಅವರಿಗಿಂತ ಮುಂದೆಯಿರಬೇಕು. ಜನತೆಯಿಂದ ಬೇರ್ಪಟ್ಟು 'ನಾಯಕತ್ವ' ನೀಡುವುದು ಅಧಿಕಾರಶಾಹಿಯಾಗುತ್ತದೆ. ಜನತೆಯ ಹಿಂದುಳಿತ ವಿಭಾಗಗಳ ಹಿಂದೆಯೇ ಉಳಿಯುವುದು ಅಥವಾ ಜನತೆಯ ಪ್ರಜ್ಞೆಯನ್ನು ಮೇಲ್ಮಟ್ಟಕ್ಕೇರಿಸುವ ಬದಲು ಪಕ್ಷವೇ ಜನಸಾಮಾನ್ಯರ ಪ್ರಜ್ಞೆಯ ಮಟ್ಟಕ್ಕಿಳಿಯುವುದು ಇದು ಇನ್ನೊಂದು ತಪ್ಪು. ಈ ಎರಡೂ ತಪ್ಪುಗಳ ಪರಿಣಾಮ ವಿನಾಶಕಾರಿ.

ವಿಕೃತಿ ಹಾಗೂ ಬಿಕ್ಕಟ್ಟು

ಸಮಾಜವಾದೀ ಬೆಳವಣಿಗೆಯ ಈ ನಿಯಮಗಳಲ್ಲಿ ಯಾವುದಾದರೂ ವಿರೂಪಗೊಂಡಾಗ ಸಮಾಜವಾದಿ

(6ನೇ ಪುಟ ನೋಡಿ)

ದಶಲಕ್ಷ ಸಹಿ ಸಂಗ್ರಹ ಕಾರ್ಯಕ್ರಮವನ್ನು ತ್ವರಿತಗೊಳಿಸಲು ಪ್ರಾಂತ ರೈತ ಸಂಘದ ಕರೆ

ರೈತರಿಂದ ಅಂತಿಮ ಮಹಾಮನವಿಗೆ ದಶಲಕ್ಷ ಸಹಿ ಸಂಗ್ರಹ ಕಾರ್ಯಕ್ರಮವನ್ನು ತ್ವರಿತಗೊಳಿಸಲು, ಜೂನ್ 12 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಕರೆ ನೀಡಿದೆ. ಈಗಾಗಲೇ ಮನವಿ ಪತ್ರಗಳನ್ನು, ಕರಪತ್ರಗಳನ್ನು ಅಚ್ಚು ಹಾಕಿಸಿ ವಿವಿಧ ಘಟಕಗಳಿಗೆ ಕಳಿಸಿಕೊಡಲಾಗಿದೆ. ಇವುಗಳು ಹೆಚ್ಚಿಗೆ ಬೇಕಾದಲ್ಲಿ ಆಯಾ ಘಟಕಗಳೇ ಅಚ್ಚು ಹಾಕಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

ಹಳ್ಳಿಯ ರೈತರ ಸ್ಥಳೀಯ, ಪ್ರಾದೇಶಿಕ ಸಮಸ್ಯೆಗಳು, ಬೇಡಿಕೆಗಳು ಇದ್ದರೆ ಅವುಗಳನ್ನು ಸಹ ಪ್ರತ್ಯೇಕ ಪುರವಣಿಯಲ್ಲಿ ಬರೆದು ಮುಖ್ಯ ಮನವಿ ಪತ್ರಕ್ಕೆ ಲಗತ್ತಿಸಬೇಕು. ಹಾಗೂ ಹಳ್ಳಿಗೊಂದು ಪ್ರತ್ಯೇಕ ಮನವಿ ಪತ್ರ ಪ್ರತಿಯಲ್ಲಿ ಅದರೊಂದಿಗೆ ಅಂಟಿಸಿದ ಕಾಗದ ಸೀಟುಗಳಲ್ಲಿ ಅನುಕ್ರಮವಾಗಿ ಸಹಿ ಹಾಕಿಸಿಕೊಳ್ಳಬೇಕೆಂದೂ ತಿಳಿಸಲಾಗಿದೆ. ಕರಪತ್ರಗಳನ್ನು ರಾಜ್ಯ ಮಾದರಿಯಲ್ಲೆ ಸಿದ್ಧಪಡಿಸಿ ಸ್ಥಳೀಯ ಪರಿಸ್ಥಿತಿ ಮತ್ತು ಸಮಸ್ಯೆಗಳನ್ನು ಅದರಲ್ಲಿ ಅಳವಡಿಸಿಕೊಂಡು ಸ್ಥಳೀಯ ಘಟಕದ ಹೆಸರಲ್ಲೆ ದೊಡ್ಡ ಪ್ರಮಾಣದಲ್ಲಿ ಅಚ್ಚು ಹಾಕಿಸಿ ಪ್ರಚಾರ ನಡೆಸಬೇಕು; ರೈತರಿಗೆ ಅವರ ಸಮಸ್ಯೆಗಳ ಬಗ್ಗೆಯೂ ಪ್ರಾಂತ ರೈತ ಸಂಘದ ಕಾರ್ಯಕ್ರಮದ ಬಗ್ಗೆಯೂ ಸಾಕಷ್ಟು ತಿಳುವಳಿಕೆ ಮಾಹಿತಿ ನೀಡುವಂತಿರಬೇಕು ಎಂದು ತಿಳಿಸಲಾಗಿದೆ.

ಎಲ್ಲ ತಾಲ್ಲೂಕು ಮತ್ತು ಗ್ರಾಮಗಳಿಗೆ ಹೋಗಿ, ಕನಿಷ್ಟ ಪಕ್ಷ ತಾಲ್ಲೂಕಿನ ಎಲ್ಲ ಮುಖ್ಯ ಗ್ರಾಮಗಳಿಗೆ ಹೋಗಿ ಸಹಿ ಸಂಗ್ರಹಿಸುವ ಕಾರ್ಯಕ್ಕಿಳಿದು, ರೈತ ಕಾರ್ಯಕರ್ತರ ಗುಂಪುಗಳನ್ನು ಸಂಘಟಿಸಿ ಸಹಿ ಸಂಗ್ರಹಿಸುವ ಕೆಲಸವನ್ನು ಆಗಸ್ಟ್ 15ರೊಳಗೆ ಪೂರ್ತಿಗೊಳಿಸಬೇಕೆಂದೂ ಪ್ರಾಂತ ರೈತ ಸಂಘ ತಿಳಿಸಿದೆ.

ಆಗಸ್ಟ್ 15ರ ಸುಮಾರಿಗೆ ನಡೆಯಲಿರುವ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ 'ವಿಧಾನ ಸೌಧ ಚಲೋ' ಕಾರ್ಯಕ್ರಮದ ದಿನಾಂಕವನ್ನು ನಿಗದಿಪಡಿಸಬೇಕೆಂದು ತೀರ್ಮಾನಿಸಲಾಗಿದೆ. ಕಾರಣ ಮುಂದಿನ ರಾಜ್ಯ ಸಮಿತಿ ಸಭೆಯಷ್ಟೊತ್ತಿಗೆ ಆಯಾ ಜಿಲ್ಲೆ, ಪ್ರದೇಶಗಳಿಗೆ ನೀಡಿರುವ ಸಹಿ ಸಂಗ್ರಹ ಕೋಟಾಗಳನ್ನು ಸಂಪೂರ್ಣ ಪೂರೈಸಿ ತಂದಿರಬೇಕೆಂದು ತೀರ್ಮಾನಿಸಲಾಗಿದೆ. ಜಿಲ್ಲಾವಾರು ಸಹಿ ಸಂಗ್ರಹ ಕೋಟಾಗಳನ್ನು ಈ ಕೆಳಗಿನಂತೆ (ಜಿಲ್ಲಾವಾರು) ನಿಗದಿಪಡಿಸಿದೆ :

ದ.ಕ. ಜಿಲ್ಲೆ—1 ಲಕ್ಷ, ಬೆಂಗಳೂರು-50 ಸಾವಿರ, ಬೆಳಗಾಂವ್-50 ಸಾವಿರ, ಧಾರವಾಡ-50 ಸಾವಿರ, ಕೋಲಾರ-50 ಸಾವಿರ, ರಾಯಚೂರು-50 ಸಾವಿರ, ಬಿಜಾಪುರ-30 ಸಾವಿರ ಹಾಗೂ ಉಳಿದ ಜಿಲ್ಲೆಯವರು ತಮಗೆ ಸಾಧ್ಯವಿರುವ ಸಹಿ ಸಂಗ್ರಹ ಕೋಟಾಗಳನ್ನು ರಾಜ್ಯ ಸಮಿತಿಗೆ ತಿಳಿಸಿ ಕಾರ್ಯಪ್ರವೃತ್ತರಾಗಬೇಕೆಂದು ಕೋರಲಾಗಿದೆ.

ಕೆಳ ಹಂತದ ಕಮಿಟಿಗಳನ್ನು ಮತ್ತು ನಾಯಕತ್ವವನ್ನು ರೂಪಿಸಿಕೊಳ್ಳದೇ ಸ್ಥಳೀಯ ಮಟ್ಟದ ಪ್ರಶ್ನೆಗಳಿಗಾಗಿ ಹೋರಾಟ ನಡೆಸುವುದು ಮತ್ತು ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ಸ್ಥಳೀಯ ಪ್ರದೇಶಗಳಲ್ಲಿ ಅಳವಡಿಸಿಕೊಂಡು ಜಾರಿಗೊಳಿಸುವುದು ಅಸಾಧ್ಯ. ಕಾರಣ ಸದಸ್ಯತ್ವದ ಆಧಾರದಲ್ಲಿ ಆಯಾ ಪ್ರದೇಶಗಳಲ್ಲಿ ಪ್ರತಿನಿಧಿ ಸಮಾವೇಶ; ಸಮ್ಮೇಳನ ಕರೆದು ಪ್ರಾದೇಶಿಕ, ಜಿಲ್ಲಾ ಸಮಿತಿಗಳನ್ನು ಕೂಡಲೇ ಚುನಾಯಿತಗೊಳಿಸಿ ಆ ಮೂಲಕ ವ್ಯವಸ್ಥಿತ ಸಂಘಟನಾ ಕ್ರಮ ಕೈಕೊಳ್ಳಬೇಕೆಂದು ಕಾರ್ಯಕಾರಿ ಸಮಿತಿ ಮನವಿ ಮಾಡಿದೆ.

ಸದಸ್ಯತ್ವ ಸೇರಿಸುವಿಕೆಯನ್ನು ಕಡ್ಡಾಯವಾಗಿ ಜುಲೈ 30ರೊಳಗಾಗಿ ಕೊನೆಗೊಳಿಸಬೇಕಾಗಿರುವುದರಿಂದ ಎಲ್ಲ ಪ್ರದೇಶಗಳ, ಜಿಲ್ಲೆಗಳ ಸಮಾವೇಶವನ್ನು ಜುಲೈ ಕೊನೆಯಲ್ಲಿ ಮತ್ತು ಆಗಸ್ಟ್ ಪೂರ್ವಾರ್ಧದಲ್ಲಿ ಮಾಡಿ ಮುಗಿಸಬೇಕಾಗಿದೆ. ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಕೆಲವು ಪ್ರದೇಶಗಳಲ್ಲಿ; ಜಿಲ್ಲೆಗಳಲ್ಲಿ ಈ ಕೆಳಗಿನ ದಿನಗಳಂದು ಪ್ರತಿನಿಧಿ ಸಮಾವೇಶಗಳನ್ನು ನಡೆಸುವುದೆಂದು ನಿಗದಿಪಡಿಸಲಾಗಿದೆ :

ಕೋಲಾರ-ಜುಲೈ 17 ಮತ್ತು 18 1982; ಬಿಜಾಪುರ-ಜುಲೈ 25, 26; ಬೆಳಗಾಂವ್-ಜುಲೈ-29, 30; ಧಾರವಾಡ-ಜುಲೈ-31 ಮತ್ತು ಆಗಸ್ಟ್ 1, 1982; ರಾಯಚೂರು-ಆಗಸ್ಟ್ 8,9, ಮೈಸೂರು-ಆಗಸ್ಟ್ ಎರಡನೇ ವಾರದಲ್ಲಿ ನಡೆಸುವುದೆಂದು ನಿಶ್ಚಿತಗೊಳಿಸಲಾಗಿದೆ.

ರಾಜ್ಯವನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಿ ಒಂದೊಂದು ವಿಭಾಗಕ್ಕೆ ಇಂಥ ಪದಾಧಿಕಾರಿಗಳು ವಿಶೇಷ ಜವಾಬ್ದಾರಿ ಎಂದು ಹೋದ ಸಭೆಯಲ್ಲಿ ನಿರ್ಣಯಿಸಿತ್ತು. ಪದಾಧಿಕಾರಿಗಳು ಮತ್ತು ರಾಜ್ಯ ಸಮಿತಿ ಸದಸ್ಯರು ರಾಜ್ಯಮಟ್ಟದ ರೈತ ಸಂಘಟನೆ ಮತ್ತು ಹೋರಾಟ ಕಟ್ಟಿ ಬೆಳೆಸುವಲ್ಲಿ ಹೆಚ್ಚು ಜವಾಬ್ದಾರಿಯಿಂದಲೂ, ಸಾಮೂಹಿಕವಾಗಿಯೂ ನೆರವೇರಿಸುವಂತಾಗಲು ಈ ರೀತಿ ಜವಾಬ್ದಾರಿಗಳನ್ನು ನಿಶ್ಚಯಿಸಲಾಗಿದೆ. ಸಂಬಂಧಿಸಿದ ಪದಾಧಿಕಾರಿಗಳು ಆಯಾ ವಿಭಾಗಗಳ ಕೆಲಸ ಕಾರ್ಯವನ್ನು ಆಯಾ ವಿಭಾಗಗಳಲ್ಲಿಯ ರಾಜ್ಯ ಸಮಿತಿ ಸದಸ್ಯರಂದೊಡಗೂಡಿ ಆ ಪ್ರದೇಶಗಳ; ಜಿಲ್ಲೆಗಳಲ್ಲಿರುವ ಕೆಳ ಸಮಿತಿಗಳಿಗೆ ಸಲಹೆ, ಮಾರ್ಗದರ್ಶನ, ಮುಂದಾಳತ್ವ ನೀಡಿ ಸ್ಥಳೀಯ ಮಟ್ಟದ ಪ್ರಶ್ನೆಗಳಿಗಾಗಿ ಹೆಚ್ಚು ಸಂಖ್ಯೆಯಲ್ಲಿ ಹೋರಾಟಗಳು ಬೆಳೆದು ಬರುವಂತೆಯೂ, ರಾಜ್ಯ ಮಟ್ಟದ ರೈತರ ವಿಶಾಲ ಐಕ್ಯ ಹೋರಾಟ ನಡೆಸುವಂತೆಯೂ ಸನ್ನದ್ಧರಾಗಬೇಕಿದೆ. ಇದು ಹೆಚ್ಚು ಅರ್ಥಪೂರ್ಣವಾಗಲು ಮೂರು ವಿಭಾಗೀಯ ಮಟ್ಟದಲ್ಲಿ ಆಗಸ್ಟ್ 15ರೊಳಗಾಗಿ ಸಂಬಂಧಿಸಿದ ಪದಾಧಿಕಾರಿಗಳ ಮತ್ತು ರಾಜ್ಯ ಸಮಿತಿ ಸದಸ್ಯರ ಪ್ರತ್ಯೇಕ ಸಭೆಗಳನ್ನು ನಡೆಸಿ ಆಯಾ ವಿಭಾಗಗಳ ಸಂಘಟನಾ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಸೂಕ್ತ ನಿರ್ಧಾರಕ್ಕೆ ಬರುವಂತೆ ತೀರ್ಮಾನಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ರೈತರ ಸಹಿ ಸಂಗ್ರಹ ಕಾರ್ಯಕ್ರಮ

ರಾಜ್ಯದ ರೈತರ ಸಮಸ್ಯೆಗಳನ್ನು ಸಮಗ್ರವಾಗಿಯೂ ಅಧಿಕೃತವಾಗಿಯೂ ಸಂಗ್ರಹಿಸಿ ಸರಕಾರದ ಮುಂದಿಡಲು ರೈತರು ಸರಕಾರಕ್ಕೆ ಒಪ್ಪಿಸುವ 'ಅಂತಿಮ ಮಹಾ ಮನವಿಗೆ' ದಶಲಕ್ಷ ಸಹಿಗಳನ್ನು ಸಂಗ್ರಹಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿರುವ ಕರ್ನಾಟಕ ಪ್ರಾಂತ ರೈತ ಸಂಘವು ಕೊಟ್ಟ ಕರೆಯ ಮೇರೆಗೆ ಬೆಳಗಾವಿ ಜಿಲ್ಲೆಯಲ್ಲಿ 50 ಸಾವಿರ ರೈತರ ಸಹಿಗಳನ್ನು ಸಂಗ್ರಹಿಸುವ ಕಾರ್ಯಕ್ರಮವನ್ನು ಬೆಳಗಾವಿ ಜಿಲ್ಲಾ ಘಟಕವು ಹಾಕಿಕೊಂಡಿದೆ. 27-6-82 ರಂದು ಸವದತ್ತಿಯಲ್ಲಿ ಕಾಂ! ಎಸ್. ಎಚ್. ಕಪ್ಪಣ್ಣವರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ರೈತ ಕಾರ್ಯಕರ್ತರ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಯಿತು. ಇನ್ನು ಒಂದು ತಿಂಗಳ ಒಳಗಾಗಿ ಜಿಲ್ಲೆಯಲ್ಲಿ ಸಂಘದ ಸದಸ್ಯತ್ವವನ್ನು ಮೂರು ಸಾವಿರಕ್ಕೆ ಏರಿಸಿ ಜುಲೈ ತಿಂಗಳ 29 ಮತ್ತು 30 ರಂದು ಎರಡು ದಿನಗಳ ಜಿಲ್ಲಾ ಮಟ್ಟದ ರೈತ ಸಮ್ಮೇಳನವನ್ನು ಜರುಗಿಸಲಾಗುವುದು. ಈ ಸಮ್ಮೇಳನದಲ್ಲಿ ಕ್ರೋಡಿಕರಿಸಲಾದ ಜಿಲ್ಲಾ ರೈತರ ಸಮಸ್ಯೆಗಳನ್ನು ಐವತ್ತು ಸಾವಿರ ಸಹಿಗಳೊಂದಿಗೆ ಕರ್ನಾಟಕ ಪ್ರಾಂತ ರೈತ ಸಂಘವು ಆಗಸ್ಟ್ ತಿಂಗಳಲ್ಲಿ ಸಂಘಟಿಸುವ ಬೃಹತ್ "ವಿಧಾನ ಸೌಧ ಚಲೋ" ಕಾರ್ಯಕ್ರಮದಲ್ಲಿ ಸರಕಾರಕ್ಕೆ ಒಪ್ಪಿಸಲಾಗುವುದು.

ರೈತ ಹುತಾತ್ಮ ದಿನಾಚರಣೆ:

ದಿನಾಂಕ 21-7-82 ರಂದು ಮಲಪ್ರಭಾ ರೈತ ಸಮನ್ವಯ ಸಮಿತಿಯ ಆಶ್ರಯದಲ್ಲಿ ನವಲಗುಂದ ತಾಲ್ಲೂಕಿನ ಅಳಗವಾಡಿಯಲ್ಲಿ ಹಾಗೂ ನರಗುಂದ ತಾಲ್ಲೂಕಿನ ಚಿಕ್ಕ ನರಗುಂದದಲ್ಲಿ ನಡೆಯುವ ರೈತ ಹುತಾತ್ಮರ ದಿನಾಚರಣೆಯಲ್ಲಿ ಬೆಳಗಾವಿ ಜಿಲ್ಲೆಯ ರೈತರು ಮುಖ್ಯವಾಗಿ ಸವದತ್ತಿ, ಬೈಲಹೊಂಗಲ, ರಾಮದುರ್ಗ ಮತ್ತು ಗೋಕಾಕ್ ತಾಲ್ಲೂಕುಗಳ ರೈತರು ದೊಡ್ಡ ಸಂಖ್ಯೆಯಲ್ಲಿ ಸೇರುವ ಏರ್ಪಾಡು ಮಾಡಲು ನಿರ್ಧರಿಸಲಾಯಿತು.

ಯಾತ ನೀರಾವರಿ ಪ್ರದೇಶದ ರೈತರ ಸಮಸ್ಯೆಗಳು :

ಮಲಪ್ರಭಾ ಯೋಜನೆಯ ಅಡಿಯಲ್ಲಿರುವ ಎಂಟು ಯಾತ ನೀರಾವರಿ ಪ್ರದೇಶದ ರೈತಾಪಿ ಜನರ ಸಮಸ್ಯೆಗಳನ್ನು ಸಭೆಯು ಗಂಭೀರವಾಗಿ ಪರಿಗಣಿಸಿದೆ. ಈ ಪ್ರದೇಶದ ಜನರು ಮಲಪ್ರಭಾ ಅಣೆಕಟ್ಟೆಗಾಗಿ ತಮ್ಮ ಮನೆ ಮಾರು ಜಮೀನುಗಳನ್ನು ಕಳಕೊಂಡಿದ್ದಾರೆ. ಇವರ ಅಳಿದುಳಿದ ಅಷ್ಟೂ ಭೂಮಿಗೂ ಸರಿಯಾದ ನೀರಿನ ವಿತರಣೆಯಾಗಬೇಕೆಂದೂ, ಇವರಿಗೂ ಉಳಿದ ನೀರಾವರಿ ಪ್ರದೇಶದ ರೈತರಿಗೂ ಕರ ಆಕರಣೆಯಲ್ಲಿ ತಾರತಮ್ಯ ಮಾಡಬಾರದೆಂದೂ, ಇವರ ಜಮೀನುಗಳನ್ನು ಸರಕಾರವೇ ಕೂಡಲೇ ಸಮಪಾತಳಿ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುವ ಠರಾವನ್ನು ಅಂಗೀಕರಿಸಲಾಯಿತು.

ಸಾಣಿಕೊಪ್ಪದ ರೈತರ ಸಮಸ್ಯೆ :

ಬೈಲಹೊಂಗಲ ತಾಲ್ಲೂಕಿನ ಸಾಣಿಕೊಪ್ಪ ಗ್ರಾಮದಲ್ಲಿ 1961ರಲ್ಲಿ ಸ್ಥಾಪನೆಯಾದ ಸಹಕಾರಿ ಸಂಘದ ಕಾರ್ಯದರ್ಶಿ, ಸದಸ್ಯರ ಅನಕ್ಷರತೆ ಅಜ್ಞಾನದ ಲಾಭ ಪಡೆದು ಸಂಘದ ಲೆಕ್ಕ ಪತ್ರಗಳಲ್ಲಿ ಮೋಸ ಮಾಡಿ ಅವ್ಯವಹಾರ ಮಾಡಿದ್ದನ್ನು ಸರಕಾರಕ್ಕೆ ತಿಳಿಸಿದಾಗ್ಯೂ ಸರಕಾರ ವಿಚಾರಣೆ ನಡೆಸಿ ಸದಸ್ಯರಿಗೆ ಅವರ ಶೇರು ಹಣವನ್ನು ವಾಪಸ್ ಕೊಡಿಸದೆ ಇರುವುದು, ಸುಳ್ಳು ಸಾಲಕ್ಕೆ ಸಂಬಂಧಪಟ್ಟ ಜಪ್ತಿ ವಗೈರೆ ಮಾಡುವುದನ್ನು ನಿಲ್ಲಿಸದೇ ಇರುವುದನ್ನು ಸಭೆಯು ತೀವ್ರವಾಗಿ ಖಂಡಿಸಿದೆ. ಈ ಬಗ್ಗೆ ಸಾಣಿಕೊಪ್ಪ ರೈತರಿಗೆ

(6ನೇ ಪುಟ ನೋಡಿ)

(4ನೇ ಪುಟದಿಂದ)

ದೇಶಗಳಲ್ಲಿ ಉಂಟಾದ ಪರಿಸ್ಥಿತಿಯಿಂದ ಬೂರ್ಜ್ವಾ ಸಿದ್ಧಾಂತಿಗಳು ಧೈರ್ಯ ತಂದುಕೊಂಡು ಸಮಾಜವಾದವೂ ಬಂಡವಾಳಶಾಹಿಯಷ್ಟೇ ಬಿಕ್ಕಟ್ಟಿನಲ್ಲಿ ಸಿಲುಕಿರುವ ವ್ಯವಸ್ಥೆ ಎಂದು ಹೇಳಲು ಅವಕಾಶವಾಗಿದೆ. ಆದರೆ ಈ ಸಿದ್ಧಾಂತಿಗಳು ಒಂದು ವಿಷಯ ಮರೆಯುತ್ತಾರೆ ಅಥವಾ ಜನ ಅದನ್ನು ಮರೆಯುವಂತೆ ಮಾಡುತ್ತಾರೆ. ಅದೆಂದರೆ, ಸಮಾಜವಾದೀ ವ್ಯವಸ್ಥೆಯಲ್ಲಿ ಸಮಾಜವಾದೀ ಬೆಳವಣಿಗೆಯ ನಿಯಮಗಳಲ್ಲಿ ಯಾವುದಾದರೊಂದು ಅಥವಾ ಒಂದಕ್ಕಿಂತ ಹೆಚ್ಚು ನಿಯಮಗಳನ್ನು ಉಲ್ಲಂಘಿಸಿದಾಗ ಬಿಕ್ಕಟ್ಟು ಏರ್ಪಡುತ್ತದೆ ಎಂದು.

ಉದಾಹರಣೆಗೆ, ಪೋಲೆಂಡಿನಲ್ಲಿ ಮೇಲೆ ತಿಳಿಸಿದ ಕನಿಷ್ಟ ನಾಲ್ಕು ನಿಯಮಗಳಾದರೂ ಉಲ್ಲಂಘಿತವಾಗಿವೆ. ಆರ್ಥಿಕತೆಯ ಸಮತೂಕದ ಹಾಗೂ ಪ್ರಮಾಣಬದ್ಧ ಅಭಿವೃದ್ಧಿ, ಜಮೀನಿನ ರಾಷ್ಟ್ರೀಕರಣ, ಪರಕೀಯ ವರ್ಗ ಸಿದ್ಧಾಂತ (ಕ್ಯಾಥೋಲಿಕ್)ದ ವಿರುದ್ಧ ಹೋರಾಟ ಹಾಗೂ ಪಕ್ಷದ ಮುಂದಾಳುತ್ವ ಇವೇ ಆ ನಿಯಮಗಳು. ಅಲ್ಲಿಯ ಪ್ರಭುತ್ವ ಹಾಗೂ ಪಕ್ಷದ ನಾಯಕತ್ವ ಈಗ ಈ ವಿಕೃತಿಗಳನ್ನು ಸರಿಪಡಿಸಿ ಸಮಾಜವಾದೀ ಅಭಿವೃದ್ಧಿ ನಡೆಯಬೇಕಾದ ರೀತಿಯಲ್ಲಿ ನಡೆಯುವಂತೆ ಮಾಡುವ ಕೆಲಸದಲ್ಲಿ ನಿರತವಾಗಿವೆ.

ಆದರೆ ಬಂಡವಾಳಶಾಹೀ ಪದ್ಧತಿಯಲ್ಲಿ ಬಿಕ್ಕಟ್ಟು ಏರ್ಪಡುವುದು ಅದರ ಅಭಿವೃದ್ಧಿಯ ನಿಯಮಗಳನ್ನು ಉಲ್ಲಂಘಿಸಿದಾಗ ಅಲ್ಲ. ಬದಲಾಗಿ, ಆ ನಿಯಮಗಳನ್ನು ಪಾಲಿಸಿದಾಗ. ಬಂಡವಾಳಶಾಹಿ ಸಮಯ-ಸಮಯಕ್ಕೆ ಅನುಭವಿಸುವ ಆವರ್ತ ಬಿಕ್ಕಟ್ಟುಗಳು ಬಂಡವಾಳಶಾಹೀ ಬೆಳವಣಿಯ ನಿಯಮಗಳ ಪರಿಣಾಮವಾಗಿಯೇ ಎಂದು ಮಾರ್ಕ್ಸ್ ಬೇರಾರೂ ನಿರಾಕರಿಸಲಾಗದ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಎಂಗೆಲ್ಸ್ ಅದನ್ನೇ ಮುಂದುವರಿಸಿ ಬಂಡವಾಳಶಾಹಿ ಹಿಂದೆಂದೂ ಕಾಣದ ಬಿಕ್ಕಟ್ಟಿನೆಡೆಗೆ ಚಲಿಸುತ್ತಿದೆ ಎಂದು ಭವಿಷ್ಯ ನುಡಿದರು; ಲೆನಿನ್ ಇನ್ನೂ ಮುಂದುವರಿದು ಬಂಡವಾಳಶಾಹಿಯು ತನ್ನ ಗುತ್ತೇದಾರಿ ಹಂತದಲ್ಲಿ ಪ್ರಮುಖ ದೇಶಗಳ ಆಳುವ ವೃತ್ತಗಳ ಹಿತಾಸಕ್ತಿಗನುಗುಣವಾಗಿ ಒಂದು ದೇಶವನ್ನು ಇನ್ನೊಂದರ ವಿರುದ್ಧ ಎತ್ತಿ ಕಟ್ಟದಿರಲು, ವಸಾಹತುಗಳ ಪುನರ್ವಿಂಗಡಣೆ ಮಾಡದಿರಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಗುತ್ತೇದಾರಿ ಬಂಡವಾಳಶಾಹಿ ತನ್ನನ್ನು ಪ್ರಭುತ್ವದ ಗುತ್ತೇದಾರಿ ಬಂಡವಾಳಶಾಹಿಯನ್ನಾಗಿ ಮಾರ್ಪಡಿಸಿಕೊಂಡು ಜಾಗತಿಕ ಶಾಂತಿಗೆ ಮತ್ತು ಅತೀ ಅಭಿವೃದ್ಧಿ ಬಂಡವಾಳಶಾಹೀ ದೇಶಗಳೂ ಸೇರಿದಂತೆ ಎಲ್ಲಾ ದೇಶಗಳ ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವಕ್ಕೆ ಬೆದರಿಕೆಯೊಡ್ಡಿದೆ ಎಂದು ಲೆನಿನ್ ನಂತರದ ಮಾರ್ಕ್ಸ್‌ವಾದಿಗಳು ತೋರಿಸಿಕೊಟ್ಟಿದ್ದಾರೆ.

[ಆಧಾರ-ಸೋಶಿಯಲ್ ಸೈಂಟಿಸ್ಟ್]

ಸಹಿ ಸಂಗ್ರಹ

(5ನೇ ಪುಟದಿಂದ)

ಅನ್ಯಾಯವಾಗದಂತೆ] ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಒತ್ತಾಯ ತರುವ ಕ್ರಮವನ್ನು ಜಿಲ್ಲಾ ಸಮಿತಿಯು ಕೈಗೊಳ್ಳುವುದು.

ಹತ್ತಿ ಬೆಳೆಯ ಮೇಲಿನ ನಿಯಂತ್ರಣ :

ಹೆಚ್ಚು ಹತ್ತಿ ಬೆಳೆಯಲು ಅವಕಾಶ ಕೊಡದಿರುವ ಸರಕಾರದ ಕ್ರಮವನ್ನು ಸಭೆಯು ವಿಮರ್ಶಿಸಿ ಇದು ಸರಿಯಲ್ಲ ವೆಂದೂ, ರೈತರು ಈ ಬಗ್ಗೆ ಸರಕಾರಕ್ಕೆ ಯಾವ ದಂಡವನ್ನು ಸಲ್ಲಿಸಬಾರದೆಂದೂ ನಿರ್ಣಯಿಸಲಾಯಿತು. ಅಲ್ಲದೆ ಈ ಪ್ರದೇಶ ನೀರಾವರಿಯ ಲಾಭವನ್ನು ನಿಜ ವಾಗಿ ಪಡೆದು ಅಭಿವೃದ್ಧಿಯಾಗುವ ವರೆಗೂ ಇಂತಹ ಯಾವುದೇ ಬಿಗಿ ಕ್ರಮ ಗಳನ್ನು ಸರಕಾರ ಅನುಸರಿಸಬಾರದೆಂದು ಸಭೆ ಸರಕಾರವನ್ನು ಅಗ್ರಹಪಡಿಸಿತು.

ಮುಖ್ಯ ಅತಿಥಿಗಳಾಗಿ ಸಭೆಯಲ್ಲಿ ಭಾಗವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ಇವರು ಮಾತ ನಾಡುತ್ತಾ ರೈತರ ಫಸಲಿಗೆ ಲಾಭದಾ ಯಕ ಬೆಲೆ ಸಿಗಬೇಕು, ಕೃಷಿ ಕೂಲಿ ಕಾರರಿಗೆ ಜೀವನಾವಶ್ಯಕ ಕೂಲಿ ಸಿಗ ಬೇಕು ಮತ್ತು ಸಾಮಾನ್ಯ ಬಳಕೆದಾರ ರಿಗೆ ಜೀವನಾವಶ್ಯಕ ವಸ್ತುಗಳು ನ್ಯಾಯ ವಾದ ಬೆಲೆಗಳಲ್ಲಿ ದೊರಕಬೇಕು ಎಂಬ ಧೋರಣೆಯುಳ್ಳ ಕರ್ನಾಟಕ ಪ್ರಾಂತ ರೈತ ಸಂಘವನ್ನು ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿಯೂ ಕಟ್ಟಿ ಬೆಳೆಸುವುದು ಅವಶ್ಯವಾಗಿದೆ ಎಂದೂ, ಜಿಲ್ಲೆಯ ರೈತರ ಸಮಸ್ತ ಸಮಸ್ಯೆ ಗಳನ್ನು ಅಧಿಕೃತವಾಗಿ ಸಂಗ್ರಹಿಸಿ ಅವು ಗಳನ್ನು ಸರಕಾರದ ಮುಂದಿಟ್ಟು ಅವು ಗಳ ಈಡೇರಿಕೆಗಾಗಿ ರಾಜ್ಯದ ಇಡೀ ರೈತಾಪಿ ವರ್ಗವನ್ನು ಹೋರಾಟಕ್ಕಿಳಿ ಸುವಲ್ಲಿ ಜಿಲ್ಲೆಯ ಕಾರ್ಯಕರ್ತರು ಕಷ್ಟ ಪಟ್ಟು ಶ್ರಮಿಸಬೇಕೆಂದು ಕರೆ ನೀಡಿ ದರು. ಆರಂಭದಲ್ಲಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ನಿತ್ಯಾನಂದ ಸ್ವಾಮಿಜಿಯವರು ಸ್ವಾಗತಿಸಿದರು.

ಮಾನವಕುಲದ ವಿನಾಶಕ್ಕೆ ಅಮೇರಿಕಾ ಸಿದ್ಧತೆ

(3ನೇ ಪುಟದಿಂದ)

ಎಲ್ಲಾ ಪ್ರಗತಿಪರ ಶಕ್ತಿಗಳೂ ಶೋಷಕ ವರ್ಗದ ವಿರುದ್ಧದ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿ ಸಂಗ ಠಿಸಿ ಯುದ್ಧ ವಿರೋಧಿ ಹೋರಾಟ ಗಳನ್ನು ಸಂಘಟಿಸಬೇಕು. ಬೀದಿ ಬೀದಿ ಗಳಲ್ಲಿ, ಗಲ್ಲಿಗಲ್ಲಿಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳು ಮೊಳಗ ಬೇಕು. ಹೀಗಾದಾಗ ಮಾತ್ರ ಶೋಷಣೆಯ ವಿರುದ್ಧದ ಹೋರಾಟ ಜಗತ್ತಿನ ಉಳಿವಿನ ಹೋರಾಟ ಕೂಡ ಆಗಬಲ್ಲದು.

—ಕುಮಾರ್ ಕುಂದಾಪುರ



ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾಂ| ಡಿ. ಎ. ಬೆಲವೇಂದ್ರ ಅವರು ತಮ್ಮ ಸಂಘದ ಸಲಹೆಗಾರರಾದ ಕಾಂ| ಸೂರ್ಯ ನಾರಾಯಣರಾವ್ ಅವರಿಗೆ ರೂ. 25,000 ಮೊತ್ತದ ಚೆಕ್ಕನ್ನು ನೀಡುತ್ತಿರುವುದು.

ರೈತ ಸಂಘ ಸ್ಥಾಪನೆ

ಶಿವಮೊಗ್ಗ :

ಶರಾವತಿ ಮುಳುಗಡೆ ಪ್ರದೇಶದಿಂದ ಶಿವಮೊಗ್ಗ ತಾಲ್ಲೂಕಿನ, ಪುರದಾಳ, ಚಿತ್ರಶೆಟ್ಟಿಹಳ್ಳಿ, ರೇವಚಿಕೊಪ್ಪ, ಆಲ ದೇವರು ಹೊಸೂರು, ಹನುಮಂತಪುರ, ಮಲೆಶಂಕರಿ, ಕಾರೆಹಳ್ಳಿ ಮುಂತಾದ ಪ್ರದೇಶಗಳಲ್ಲಿ ನೂರಾರು ಜನ ಸುಮಾರು 15 ವರ್ಷಗಳಿಂದ ಬಂದು ನೆಲೆಸಿದ್ದಾರೆ.

ಈ ಪ್ರದೇಶಗಳ ರೈತರ ಸಭೆ ಶಿವ ಮೊಗ್ಗೆಯಲ್ಲಿ ನಡೆಯಿತು. ಕಾಂ| ತಿರುಕಪ್ಪ ಅಧ್ಯಕ್ಷತೆ ವಹಿಸಿದ್ದರು.

ಈ ಮೇಲ್ಕಾಣಿಸಿದ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆಯಾಗಲಿ, ರಸ್ತೆ ಸೌಕರ್ಯವಾಗಲಿ, ಆರೋಗ್ಯ ಕೇಂದ್ರ, ಪಶು ವೈದ್ಯಶಾಲೆ ಮುಂತಾದ ಯಾವ ಸೌಕರ್ಯಗಳೂ ಇಲ್ಲ. ಈ ತುರ್ತು ಬೇಡಿಕೆಗಳಿಗೆ ರೈತರು ಸಂಬಂಧಪಟ್ಟ ಅಧಿಕಾರಿಗಳಿಗೆ, ಮಂತ್ರಿ ಮಹಾಶಯ ರಿಗೆ ಅನೇಕ ನಿವೇದನೆಗಳನ್ನು ಕೊಟ್ಟರೂ ಇದುವರೆಗೂ ಯಾವ ಪ್ರಯೋಜನವಾ ಗಿಲ್ಲ. ಕಾರಣ ಈ ಪ್ರದೇಶಗಳ ರೈತರು ಸಂಘಟಿತರಾಗಿ ರೈತ ಸಂಘದಡಿಯಲ್ಲಿ ಹೋರಾಡಲು ತೀರ್ಮಾನಿಸಿದ್ದಾರೆ.

ಜೂನ್ 27 ರಂದು ನಡೆದ ಈ ಸಭೆಯನ್ನುದ್ದೇಶಿಸಿ ಕಾಂ| ಚಂದೂ ಕುಟ್ಟಿ, ಲಕ್ಷ್ಮೀನಾರಾಯಣ, ಶಿವ ಶಂಕರ, ರಾಜಪ್ಪ, ದತ್ತಪ್ಪ, ವೀರ ಭದ್ರಪ್ಪ, ದಾಸಪ್ಪ ಮುಂತಾದವರು ಸಂಘಟನೆಯ ಬಗ್ಗೆ ಮಾತನಾಡಿದರು.

ಕಾಂ| ತಿರುಕಪ್ಪನವರು ಮಾತನಾಡಿ ರೈತರು ಸಂಘಟಿತರಾಗಲು ಕರೆ ನೀಡಿ ದರು.

ರೈತರ ಬೇಡಿಕೆಗಳನ್ನು ಈಡೇರಿಸಲು 'ಶಿವಮೊಗ್ಗ ತಾಲ್ಲೂಕು ರೈತ ಸಂಘ' ಎಂಬ ಹೆಸರಿನಲ್ಲಿಯೇ ಮುಂದಿನ ಕಾರ್ಯ ಕ್ರಮಗಳನ್ನು ನಡೆಸಬೇಕೆಂದೂ, ಈ ಸಂಘ ಕರ್ನಾಟಕ ಪ್ರಾಂತ ರೈತ ಸಂಘದ ಶಾಖೆಯಾಗಿ ಕೆಲಸಮಾಡಬೇಕೆಂದು ತೀರ್ಮಾನಿಸಲಾಯಿತು.

ರೈತ ಸಂಘದ ಪದಾಧಿಕಾರಿಗಳನ್ನಾಗಿ ಈ ಕೆಳಕಂಡವರನ್ನು ಆಯ್ಕೆ ಮಾಡ ಲಾಗಿದೆ :

ಅಧ್ಯಕ್ಷರಾಗಿ ಕಾಂ| ತಿರುಕಪ್ಪ, ಉಪಾಧ್ಯಕ್ಷರುಗಳಾಗಿ ಶ್ರೀ ರಾಜಪ್ಪ ಮತ್ತು ವೀರಭದ್ರಪ್ಪ, ಕಾರ್ಯದರ್ಶಿ ಯಾಗಿ ಕಾಂ| ಚಂದೂಕುಟ್ಟಿ, ಸಹ ಕಾರ್ಯದರ್ಶಿಗಳಾಗಿ ಶ್ರೀ ಜಿ. ಬಿ. ದಾಸಪ್ಪ ಮತ್ತು ಗಿಡ್ಡಾನಾಯ್ಕ, ಖಜಾಂಚಿಯಾಗಿ ಶ್ರೀ ಮಂಜಾನಾಯ್ಕ ಮತ್ತು 9 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಗಿದೆ.

ಊರುಕೆರೆ :

1-7-82 ರಂದು ತುಮಕೂರು ಕಸಬಾ ಊರುಕೆರೆ ಗ್ರಾಮದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಶಾಖೆಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಶ್ರೀ ಮುದ್ದರಂಗಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಯ್ತು.

ಈ ಸಭೆಗೆ ಸಣ್ಣ ಹಿಡುವಳಿದಾರರ ಮತ್ತು ವ್ಯವಸಾಯ ಕೂಲಿಗಾರರ ಮುಖಂಡರುಗಳು ಆಗಮಿಸಿ ರೈತರ ಮತ್ತು ಕೂಲಿಗಾರರ ಸಮಸ್ಯೆಗಳ ಪರಿ ಹಾರಕ್ಕಾಗಿ ತ್ವರಿತವಾಗಿ ಕೈಗೊಳ್ಳಬೇ ಕಾದ ಕಾರ್ಯಕ್ರಮಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ಪ್ರಾರಂಭ ದಲ್ಲಿ ತುಮಕೂರಿನಿಂದ ಆಗಮಿಸಿದ್ದ ಕಾಂ| ಟಿ. ಕೆ. ಗೋವಿಂದರಾಜು ಅವರು ಸರ್ವರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ರೈತ ಸಂಘದ ಮುಖಂಡ ಕಾಂ| ಎಚ್. ಸಿ. ಚನ್ನಪ್ಪನವರು ಮಾತನಾಡಿ ರೈತ ಸಂಘದ ಕುರಿತು ದೀರ್ಘ ವಿವರಣೆ ನೀಡಿದರು. ಟಿ.ಎಚ್. ನರಸಿಂಹಯ್ಯ, ಪುಟ್ಟಲಿಂಗಪ್ಪ ಮತ್ತು ಪಾತಲಿಂಗಯ್ಯ ಅವರು ಮಾತನಾಡಿ ಸ್ಥಳೀಯ ಸಮಸ್ಯೆಗಳಿಗೆ ಸಂಘದ ನೆರ ವನ್ನು ಅಪೇಕ್ಷಿಸಿದರು.

ಸಭೆಯಲ್ಲಿ 25 ಸದಸ್ಯರನ್ನೊಳ ಗೊಂಡ ತಾತ್ಕಾಲಿಕ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಿ, ಶ್ರೀ ಪಿ. ಪಾತ ಲಿಂಗಪ್ಪ ಮತ್ತು ಟಿ. ಎಚ್. ನರ ಸಿಂಹಯ್ಯ ಇವರುಗಳನ್ನು ಸಂಘದ ಸಂಚಾಲಕರನ್ನಾಗಿ ಚುನಾಯಿಸಲಾ ಯಿತು.

ಕೊನೆಯಲ್ಲಿ ಶ್ರೀ ವಿ. ರಂಗಪ್ಪ ದಾಸರು ವಂದಿಸಿದರು.

ಬಿಣಗಾ :

ಬಿಲ್ಟ್ ಆಡಳಿತ ವರ್ಗದವರು ನಡೆಸುತ್ತಿರುವ ಘೋರ ಅನ್ಯಾಯ

ಬಿಣಗಾ (ಕಾರವಾರ) ಕಾಸ್ಟಿಕ್ ಸೋಡಾ ಕಾರಖಾನೆಯ ಆಡಳಿತ ವರ್ಗವು ಅಲ್ಲಿನ ಕಾರ್ಮಿಕರನ್ನು ಅನ್ಯಾಯವಾಗಿ ಹಿಂಸಿಸುತ್ತಿದೆ.

ಅನೇಕ ವರ್ಷಗಳ ಹಿಂದಿನಿಂದಲೇ ಕಾರ್ಮಿಕ ಸಂಘ ಕಟ್ಟಿಕೊಂಡು ಹೋರಾಡುವ ಹಕ್ಕನ್ನು ತನ್ನದಾಗಿಸಿ ಕೊಂಡಿದ್ದಾನೆ. ಈ ಸಂಘ ಸ್ವಾತಂತ್ರ್ಯ ಮೂಲಭೂತವಾದದ್ದೆಂದು ನಮ್ಮ ಸಂವಿಧಾನ ಸಾರುತ್ತದೆ. ಆದರೆ ಈ ಕಾರ್ಖಾನೆಯಲ್ಲಿ ಆ ಅಧಿಕಾರಕ್ಕೆ ಮುಟ್ಟುಗೋಲು! ಯಾವೊಬ್ಬ ಕಾರ್ಮಿ ಕನೂ ಕಾನೂನಾತ್ಮಕವಾಗಿ ರೂಪಿಸಿ ಕೊಂಡ ಸಂಘದ ಕಾರ್ಯಕರ್ತನಾಗು ವಂತಿಲ್ಲ. ಹೀಗೆ ಮುಂದೆ ಬಂದವ ರನ್ನು ಒಂದಿಲ್ಲ ಒಂದು ರೀತಿಯಿಂದ ಹಿಂಸಿಸಿ, ಅನ್ಯಾಯವಾಗಿ ಹೊರನೂಕು ತ್ತಿದ್ದಾರೆ. ಈಗಾಗಲೇ ಐದು ಜನ ಕಾರ್ಮಿಕ ಮುಖಂಡರನ್ನು ಹೊರ ದೂಡಲಾಗಿದೆ.

ಈಗ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್. ಪಿ. ಅರ್ವಾರೆಯವ ರನ್ನು ಸುಳ್ಳು ಅಪಾದನೆ ಹೊರಿಸಿ ಕೆಲಸ ದಿಂದ ತೆಗೆದು ಹಾಕಲಾಗಿದೆ. ವಿಚಾರ ಣೆಯಲ್ಲಿ, ಅಪಾದನೆ ಸುಳ್ಳಿನ ಕಂತೆ ಎಂದು ಸ್ಪಷ್ಟವಾಗಿದ್ದರೂ ಸಂಘದ ಚಟುವಟಿಕೆಗಳಲ್ಲಿ ಸಕ್ರೀಯ ಪಾತ್ರ ವಹಿಸಿದ್ದಕ್ಕೆ ಅರ್ವಾರೆಯವರಿಗೆ ಈ ಶಿಕ್ಷೆ.

ಇಷ್ಟು ಸಾಲದೆಂಬಂತೆ ಸಂಘದ ಕಾರ್ಯಕರ್ತರಿಗೆ ಹೆಚ್ಚಿನ ಕೆಲಸ ಹೇಳು ವುದು, ಅವರ ದರ್ಜೆಯಲ್ಲದ ಕೆಲಸ ವನ್ನು ಮಾಡುವಂತೆ ಅವರನ್ನು ಒತ್ತಾ ಯಿಸುವುದು ನಡೆದಿದೆ. ಪ್ರತಿಭಟಿಸಿ ದಾಕ್ಷಣ ಉಗ್ರಕ್ರಮ ತೆಗೆದುಕೊಳ್ಳು ವುದು ದಿನ ನಿತ್ಯದ ಮಾತಾಗಿದೆ. ಸಂಘದ ಕಾರ್ಯದರ್ಶಿ ಕಾಂ| ಎನ್. ಜಿ. ನಾಯ್ಕರ್ ಅವರ ಮೇಲೂ ದಬ್ಬಾ ಳಿಕೆ ನಡೆದಿದೆ. ಅವರ ಮೇಲಾಧಿಕಾರಿ ಗಳು, ಪಾಳಿ (ಷಿಫ್ಟ್)ಯಲ್ಲಿ ಒಮ್ಮೆ ಮಾಡುವ ಕೆಲಸವನ್ನು ಇನ್ನು ಮುಂದೆ ಅವರ ಪಾಳಿಯಲ್ಲಿ ನಾಲ್ಕು ಬಾರಿ ಮಾಡುವಂತೆ ಕಾಂ| ನಾಯ್ಕರ್ ಅವ ರಿಗೆ ಆಜ್ಞಾಪಿಸಿದರು. ಕಾಂ| ನಾಯ್ಕರ್ ಅವರು ಹೆಚ್ಚಿನ ಕೆಲಸಗಾರರನ್ನು ಬೇಡಿ ದಾಗ ಕೆಲಸ ನಿರಾಕರಿಸಿದರೆಂದು ಸಸ್ಪೆಂಡ್ ಮಾಡಿದ್ದಾರೆ.

ಅನ್ಯಾಯವಾಗಿ ಕಾಂ| ಅರ್ವಾರೆ ಮತ್ತು ಕಾಂ| ನಾಯ್ಕರ್ ಅವರನ್ನು ತಕ್ಷಣ ಕೆಲಸಕ್ಕೆ ವಾಪಸ್ ತೆಗೆದುಕೊಳ್ಳ ಕೆಂದು ಕಾರ್ಮಿಕ ಸಂಘ ಆಡಳಿತ ವರ್ಗ ವನ್ನು ಒತ್ತಾಯಿಸಿದೆ. ಕೂಡಲೇ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸದಿದ್ದಲ್ಲಿ ತೀವ್ರ ಚಳವಳಿ ಹೂಡಬೇಕಾದೀತೆಂದೂ ಎಚ್ಚರಿಸಿದೆ.

ದಾಂಡೇಲಿ :

ಅಪಘಾತದಲ್ಲಿ ಮೃತನಾದ ಕಾರ್ಮಿಕನಿಗೆ ಪರಿಹಾರ

1-7-82 ರಂದು ಬೆಳಿಗ್ಗೆ 10-30 ಘಂಟೆಗೆ ದಾಂಡೇಲಿಯ ಪೇಪರ್ ಮಿಲ್ಲಿನ ಪೇಪರ್ ಕತ್ತರಿಸುವ ಯಂತ್ರ ದಿಂದ ಸುಮಾರು 3 ಟನ್ ಭಾರದ ಪೇಪರ್ ರೀಲು ಉರುಳಿ 28 ವಯಸ್ಸಿನ ಹನುಮಂತ ಉಪ್ಪಾರ ಎಂಬ ಕಾರ್ಮಿಕ ಸ್ಥಳದಲ್ಲೆ ಜಜ್ಜಿ ಹೋಗಿ ಮೃತಪಟ್ಟ ದುರ್ಘಟನೆ ವರದಿಯಾಗಿದೆ.

ಪೇಪರ್ ಮಿಲ್ಲಿನ ಆಡಳಿತ ವರ್ಗವು ಒಳಗೆ ಸತ್ತಿಲ್ಲ, ಆಸ್ಪತ್ರೆಗೆ ಬಂದ ಮೇಲೆ ಸತ್ತಿದ್ದಾನೆ ಎಂದು ಸುಳ್ಳು ಹೇಳಿಕೆ ನೀಡಿತು. ಅಲ್ಲದೇ ಪೇಪರ್ ಮಿಲ್ಲಿನ ಆಸ್ಪತ್ರೆಯ ಮುಖ್ಯಾಧಿಕಾರಿ ಡಾಕ್ಟರ್ ಬ್ಯಾಕೋಡೆ ಎಂಬ ಮಹಾಷಯ ಸಹ ಸುಳ್ಳು ಹೇಳಿಕೆ ನೀಡಿರುವುದಾಗಿ ತಿಳಿದು ಬಂದಿದೆ. ಮಧ್ಯಾಹ್ನ 12 ಘಂಟೆಗೆ, ರೊಚ್ಚಿಗೆದ್ದ ಕಾರ್ಮಿಕರೆಲ್ಲ ಆಸ್ಪತ್ರೆಗೆ ಬಂದು ಎಲ್ಲಾ ಅಧಿಕಾರಿಗಳನ್ನು ಘೇರಾ ಯಿಸಿ, ಪೂರ್ಣ ಪರಿಹಾರ ಸಿಗುವವ ರೆಗೂ ಮೃತನ ದೇಹವನ್ನು ತೆಗೆದು ಕೊಂಡು ಹೋಗುವುದಿಲ್ಲವೆಂದು ಘೋಷಿಸಿದರು. ಮೃತಪಟ್ಟ ಕಾರ್ಮಿ ಕನ ಡಿಪಾರ್ಟ್‌ಮೆಂಟ್‌ನ ಎಲ್ಲ ಕಾರ್ಮಿ ಕರು ಕೆಲಸವನ್ನು ನಿಲ್ಲಿಸಿದರು. ಸಿ ಐ. ಟಿ.ಯು.ಗೆ ಸೇರಿದ ಎಲ್ಲಾ ಕಾರ್ಮಿಕರು ಕಪ್ಪು ಬಾವುಟ ಹಿಡಿದು ಪ್ರದರ್ಶನ ನಡೆಸಿದರು.

ಸಿ.ಪಿ.ಐ.(ಎಂ) ದಾಂಡೇಲಿ ಘಟಕದ ಕಾರ್ಯದರ್ಶಿ ಹಾಗೂ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ| ಉಮೇಶ್ ನಾಯ್ಕ, ದಾಂಡೇಲಿ ಮುನಿಸಿಪಾಲಿಟಿ ಕೌನ್ಸಿಲರುಗಳಾದ ಕಾಂ| ಜಿ. ವಿ. ನಾಯಕ್, ಕಾಶೀಮಖಾನ್, ಕಲ್ಲು ಟ್ಕರ್, ರಾಮಚಂದ್ರ ದೇವಳಿ. ಕಾಂಬಳೆ ಮತ್ತು ಕಾಂ| ಟಿ. ಟಿ. ನಾಯ್ಕ, ಕಾಂ| ರಾಜೇಂದ್ರ ಪ್ರಸಾದ್ ಮುಂತಾದವರೆಲ್ಲ ಮಿಲ್ಲಿನ ಮಾಲೀಕನ ಹತ್ತಿರ ಮಾತುಕತೆ ನಡೆಸಿ ಮೃತನ ಕುಟುಂಬಕ್ಕೆ ಪ್ರತಿ ತಿಂಗಳಿಗೆ 700 ರೂ. ಸಿಗುವಷ್ಟು ಹಣ ವನ್ನು ಅಂದರೆ ಸುಮಾರು 70 ಸಾವಿರ ರೂಗಳನ್ನು ಬ್ಯಾಂಕಿನಲ್ಲಿ ಫಿಕ್ಸಡ್ ಡಿಪಾಸಿಟ್ ಮಾಡಬೇಕೆಂದು ಒಪ್ಪಂ ದಕ್ಕೆ ಬರಲಾಯಿತು. ಈ 70 ಸಾವಿರ ರೂ.ಗಳಲ್ಲಿ ಆಡಳಿತ ವರ್ಗವು 35 ಸಾವಿರ ರೂ.ಗಳನ್ನೂ, ಉಳಿದ 35 ಸಾವಿರ ರೂ.ಗಳನ್ನು ಎಲ್ಲ ಕಾರ್ಮಿಕ ರಿಂದ ಸಂಗ್ರಹಿಸಬೇಕೆಂದು ತೀರ್ಮಾನಿಸ ಲಾಗಿದೆ. ಈ ಸೂಚನೆಗೆ ಆಡಳಿತ ವರ್ಗ ಒಪ್ಪಿದೆ. ಅಲ್ಲದೆ ಇನ್ನು ಮುಂದೆ ಕಂಪನಿಯಲ್ಲಿ ಅಪಘಾತಕ್ಕೀಡಾದ ಕಾರ್ಮಿಕರಿಗೆ ಪರಿಹಾರ ಕೊಡಲೂ ಆಡಳಿತ ವರ್ಗ ಒಪ್ಪಿದೆ.

ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಪ್ರಶಂಸೆ

(2ನೇ ಪುಟದಿಂದ)

ಮುಸೊಲೋನಿ ತನ್ನ ಫ್ಯಾಸಿಸ್ಟ್ ಅಧಿಪತ್ಯವನ್ನು ವಿಸ್ತರಿಸಲು ಹವಣಿಸುತ್ತಿದ್ದನು. ಈ ಎರಡೂ ಫ್ಯಾಸಿಸ್ಟ್ ಶಕ್ತಿಗಳು ಒಟ್ಟುಗೂಡಿ ಸ್ಪೈನಿನ ಗಣರಾಜ್ಯದ ಅಧಿಕಾರವನ್ನು ಎದುರಿಸಲು ಮತ್ತು ನಾಶಪಡಿಸಲು ಹವಣಿಸುತ್ತಿದ್ದವು.

ವಿಶ್ವದ ಸಾಮ್ರಾಜ್ಯಶಾಹಿ ಕರಾಳ ಶಕ್ತಿಗಳು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿ ಶಕ್ತಿಗಳೊಟ್ಟಿಗೆ ಸಾಮೂಹಿಕ ಭದ್ರತೆಗಾಗಿ ಸೋವಿಯತ್ ರಷ್ಯಾದ ಯೋಜನೆಯ ವಿರುದ್ಧ ಯುದ್ಧ ಸಾರಲು ಹಿಟ್ಲರನಿಗೆ ಉತ್ತೇಜನ ನೀಡುತ್ತಿದ್ದವು.

ಯೂರೋಪಿನ ಪ್ರತಿಯೊಂದು ದೇಶದಲ್ಲೂ ಫ್ಯಾಸಿಸಂ ಮುಂದುವರೆಯುತ್ತಾ ಅಲ್ಲಿನ ಭ್ರಷ್ಟಾಚಾರ ಮತ್ತು ಬೂರ್ಶ್ವಾ ಆಡಳಿತಕ್ಕೆ ಉತ್ತೇಜನ ನೀಡುತ್ತಿದ್ದವು ಮತ್ತು ಜನಪರವಾಗಿ ನಿಲ್ಲುವ ನಟನೆ ಮಾಡುತ್ತಿದ್ದವು.

ಯಾವ ಒಂದು ಶಕ್ತಿಯು ಫ್ಯಾಸಿಸಂ ಬೆಳವಣಿಗೆಯನ್ನು ನುಚ್ಚು ನೂರು ಮಾಡಿ ಜನತೆಯನ್ನು ಕಾಪಾಡಬೇಕಿತ್ತೋ ಅದು ಬಲ ಸೋಷಿಯಲ್ ಡೆಮಾಕ್ರೆಟಿಕ್ ನಾಯಕರುಗಳ ವಿಶ್ವಾಸಘಾತಕ ತನದಿಂದ ಬೇರೆಬೇರೆಯಾಗಿದ್ದಿತು ಪಶ್ಚಿಮ ಯೂರೋಪಿನ ದೊಡ್ಡ ದೊಡ್ಡ ಕಾರ್ಮಿಕ ಸಂಘದ ಚಳುವಳಿಗಳು, ಹಿರಿಯ ಸೋಷಿಯಲ್ ಡೆಮಾಕ್ರೆಟಿಕ್ ಪಕ್ಷಗಳು ಮತ್ತು ಹೋರಾಟಗಾರರಾದ ಕಮ್ಯುನಿಸ್ಟ್ ಪಕ್ಷಗಳು ಒಂದಾಗಿ ನಿಂತಲ್ಲಿ ಫ್ಯಾಸಿಸ್ಟ್ ಶಕ್ತಿಗಳನ್ನು ಎತ್ತಿ ಹಾಕುವಷ್ಟು ಸಾಮರ್ಥ್ಯಶಾಲಿಯಾಗಿದ್ದವು. ಆದರೆ ಸೋಷಿಯಲ್ ಡೆಮಾಕ್ರೆಟಿಕ್ ನಾಯಕರುಗಳ ಕಮ್ಯುನಿಸ್ಟ್ ವಿರೋಧಿ ನಿಲವು ಫ್ಯಾಸಿಸ್ಟ್‌ಗಳಿಗಿಂತ ಕಮ್ಯುನಿಸ್ಟ್‌ಪಕ್ಷಕ್ಕೆ ಆತಂಕಕಾರಿಯಾಗಿದ್ದಿತು. ಪ್ರಜಾಪ್ರಭುತ್ವದ ಉಳಿವಿಗಾಗಿ ಫ್ಯಾಸಿಸಂ ವಿರುದ್ಧ ಹೊರಾಡಲು ಹಲವಾರು ನಿವೇದನೆಗಳಾದ ಐಕ್ಯರಂಗ, ಜಂಟೀ ಕಾರ್ಯಾಚರಣೆಗಳು ಸೋಷಿಯಲ್ ಡೆಮಾಕ್ರೆಟಿಕ್ ಅವರಿಂದ ತಿರಸ್ಕರಿಸಲ್ಪಟ್ಟವು. ಇದೇ ಸಮಯದಲ್ಲಿ ಕಮ್ಯುನಿಸ್ಟ್‌ಪಕ್ಷಗಳ ಒಳಗೂ ಸಾಕಷ್ಟು ಗೊಂದಲವಿದ್ದಿತು. ಎಲ್ಲರಿಗೂ ಫ್ಯಾಸಿಸಂ ಬೆಳವಣಿಗೆಯಿಂದ ಉಂಟಾಗುವ ಗುಣಾತ್ಮಕ ಬದಲಾವಣೆಯ ಅಪಾಯದ ಬಗ್ಗೆ ಸಾಕಷ್ಟು ತಿಳುವಳಿಕೆ ಇರಲಿಲ್ಲ. ಕೆಲವರ ವಾದದಂತೆ ಬೂರ್ಶ್ವಾ ಪ್ರಜಾಪ್ರಭುತ್ವವು ಶ್ರಮಿಕವರ್ಗದ ಪ್ರಜಾಪ್ರಭುತ್ವದ ಒಟ್ಟಿಗೆ ಸಂಭಂದಹೊಂದಿದೆ. ಆದ್ದರಿಂದ ಅದನ್ನು ಫ್ಯಾಸಿಸ್ಟ್ ಶತ್ರುಗಳ ಆಘಾತದಿಂದ ರಕ್ಷಿಸುವ ಅಗತ್ಯತೆಯನ್ನು ಕಾಣದಾದರು.

ಬಲ ಸೋಷಿಯಲ್ ಡೆಮಾಕ್ರೆಸಿಗಳು ಅವರ ವ್ಯವಸ್ಥಿತ ವಿಶ್ವಾಸಘಾತಕನದಿಂದ ಸಂಶಯಕ್ಕೆ ಒಳಗಾದರು, ಸುಲಭವಾಗಿ ಕಾರ್ಮಿಕ ಸಂಘಗಳ ಐಕ್ಯತೆಯನ್ನು ಮತ್ತು ಐಕ್ಯರಂಗದ ಬೆಳವಣಿಗೆಯನ್ನು ಕಾಣದಾದರು. ಹಲವಾರು ಜನರು ಫ್ಯಾಸಿಸಂ ಲಕ್ಷಣಗಳ ಬಗ್ಗೆ ಗೊಂದಲಕ್ಕೆ ಒಳಗಾಗಿದ್ದರು.

ಚರಿತ್ರಾರ್ಹ ಸಾಧನೆ ಎಂದರೆ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ 7ನೇ ಕಾಂಗ್ರೆಸ್ಸಿನಲ್ಲಿ ದಿಮಿತ್ರೋವ್ ಪ್ರಮುಖ ಪಾತ್ರವಹಿಸಿ ಈ ಗೊಂದಲ ಮತ್ತು ಡೋಲಾಯಮಾನವನ್ನು ನೀಗಿಸಿ ವಿಶ್ವದ ಕಾರ್ಮಿಕ ವರ್ಗಕ್ಕೆ ಫ್ಯಾಸಿಸಂ ಮತ್ತು ಅದರ ಯುದ್ಧಕೋರ ನೀತಿಯನ್ನು ಎದುರಿಸಲು ಒಂದು ನಿರ್ಧಿಷ್ಟ ಧೋರಣೆಯನ್ನು ರೂಪಿಸಿಕೊಟ್ಟರು. ದಿಮಿತ್ರೋವ್ ಈ ಅಂತರ ರಾಷ್ಟ್ರೀಯ ನಿಲುವೆಯನ್ನು ಸ್ಪಷ್ಟಪಡಿಸುವಲ್ಲಿ ಮತ್ತು ವಿಶ್ವ ಕಾರ್ಮಿಕ ವರ್ಗಕ್ಕೆ ಹೊಸ ಸಂಕಲ್ಪ ಮತ್ತು ನಂಬಿಕೆಯಿಂದ, ವಿಶ್ವ ಕಾರ್ಮಿಕರ ಮತ್ತು ಜನತೆಯ ಶತ್ರುವಾದ ನಿರ್ದಯಿ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಲು ಮುಂದಾದರು.

ಫ್ಯಾಸಿಸಂ ಅಧಿಕಾರಕ್ಕೆ ಬರುವುದು ಒಂದು ಬೂರ್ಜ್ವಾ ಸರ್ಕಾರವು ಹೋಗಿ ಮತ್ತೊಂದು ಪರ್ಯಾಯ ಸರ್ಕಾರ ಬರುವುದರ ಸಾಮಾನ್ಯ ಪರಿಸ್ಥಿತಿಯಲ್ಲಿ. ಒಂದು ವರ್ಗ ಪ್ರಾಧಾನ್ಯವಾದ ಬೂರ್ಜ್ವಾ ಪ್ರಭುತ್ವ-ಬೂರ್ಜ್ವಾ ಪ್ರಭುತ್ವದ ಇನ್ನೊಂದು ಮುಖ.—ಬಹಿರಂಗ ಭಯೋತ್ಪಾದಕ ಸರ್ವಾಧಿಕಾರತ್ವ. ಈ ವ್ಯತ್ಯಾಸವನ್ನು ನಿರ್ಲಕ್ಷಿಸುವುದು ಬಹಳ ಗುರುತರವಾದ ತಪ್ಪು. ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರ ಹಿಡಿಯುವುದನ್ನು ಎದುರಿಸಲು ಕ್ರಾಂತಿಕಾರಿ ಶ್ರಮಜೀವಿ ವರ್ಗ, ನಗರಗಳಲ್ಲಿರುವ ದುಡಿಯುವ ಜನತೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಜನತೆಯನ್ನು ಒಟ್ಟುಗೂಡಿಸಿ ನಡೆಸುವ ಹೋರಾಟವನ್ನೇ ತಡೆಹಿಡಿಯುವ ಒಂದು ದೊಡ್ಡ ತಪ್ಪನ್ನೇ ಮಾಡಿದಂತೆ ಆಗುತ್ತದೆ. ಮತ್ತು ಬೂರ್ಜ್ವಾಗಳಲ್ಲಿರುವ ವೈರುಧ್ಯದ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದನ್ನೇ ತಪ್ಪಿಸಿದಂತೆ ಆಗುತ್ತದೆ

ವಾಸ್ತವವಾಗಿ ಫ್ಯಾಸಿಸಂ ಅಧಿಕಾರಕ್ಕೆ ಬರುವುದು ಹಳೆಯ ಬೂರ್ಜ್ವಾ ಪಕ್ಷಗಳಲ್ಲಿ ಹಲವೊಮ್ಮೆ ತಲೆದೋರುವ ಪರಸ್ಪರ ಶಿಕ್ಕಾಟಗಳಿಂದ, ಕೆಲವೊಮ್ಮೆ ಫ್ಯಾಸಿಸ್ಟ್ ಬಿಡಾರದಲ್ಲಿಯೇ ಉಂಟಾಗುವ ಶಿಕ್ಕಾಟಗಳಿಂದ, ಕೆಲವೊಮ್ಮೆ ಈ ಶಿಕ್ಕಾಟಗಳು ಸಶಸ್ತ್ರ ಹೋರಾಟಗಳಿಗೂ ಹಾದಿಮಾಡಿಕೊಡುತ್ತವೆ.

ಜರ್ಮನಿಯ ಸೋಶಿಯಲ್ ಡೆಮಾಕ್ರೆಸಿಗಳು ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯದಿದ್ದಲ್ಲಿ ಫ್ಯಾಸಿಸಂ ಅಧಿಕಾರಕ್ಕೆ ಬರುವುದನ್ನು ತಡೆಯಬಹುದಾಗಿದ್ದಿತು ಎಂದು ದಿಮಿತ್ರೋವ್ ಹೇಳಿದ್ದಾರೆ.

ಕಾರ್ಮಿಕ ವರ್ಗದ ಐಕ್ಯತೆಯಲ್ಲಿದ್ದ ನ್ಯೂನತೆಗಳಲ್ಲದೆ ರೈತಾಪಿ ವರ್ಗವನ್ನು ಕಡೆಗಣಿಸಿದ್ದೂ ಸಹ ಫ್ಯಾಸಿಸ್ಟ್ ಶಕ್ತಿಗಳು ಬೆಳೆಯಲು ಕಾರಣವಾಯಿತು. ಸೋಶಿಯಲ್ ಡೆಮಾಕ್ರೆಟಿಕ್‌ಗಳ ಆರ್ಥಿಕವಾದದ ನೆಲೆಯ ಮೇಲೆ ಆದ ಸುಧಾರಣೆಗಳೂ ರೈತ ವಿರೋಧಿ ಧೋರಣೆಗಳಿಗೆ ಅವಕಾಶ ನೀಡಿತು. ಶ್ರಮಿಕ ವರ್ಗ ತನ್ನ ನೈಜ ಮಿತ್ರರಿಂದ ದೂರ ಸರಿದದ್ದು ಫ್ಯಾಸಿಸಂ ಬೆಳೆಯಲು ಕಾರಣವಾಯಿತು. ಸೋಶಿಯಲ್ ಡೆಮಾಕ್ರೆಟಿಕ್‌ಗಳು ರೈತ-ವಿರೋಧಿ ಧೋರಣೆಗಳನ್ನೇ ಸಮರ್ಥಿಸಿಕೊಂಡು, ಕಾರ್ಮಿಕ ವರ್ಗದ ಹೆಸರಿನಲ್ಲಿ ರೈತರ ಸಮೂಹವನ್ನು ಗೆದ್ದದ್ದು ಫ್ಯಾಸಿಸಂ ಬೆಳೆಯಲು ಅವಕಾಶವಾಯಿತು."

ದಿಮಿತ್ರೋವ್ ಅಗ್ರಹ ಪೂರ್ವಕವಾಗಿ "ಫ್ಯಾಸಿಸಂ ಶಕ್ತಿಗಳ ಬೆಳವಣಿಗೆಯನ್ನು ತಡೆಗಟ್ಟುವುದು ಕಾರ್ಮಿಕ ವರ್ಗದ ಪ್ರಥಮ ಮತ್ತು ಪ್ರಧಾನ ನಿಷ್ಠ ಕಾರ್ಯತತ್ಪರತೆಯಿಂದ ಮಾತ್ರ ಸಾಧ್ಯ. (ಬಂಡವಾಳಶಾಹಿ ಮತ್ತು ಫ್ಯಾಸಿಸಂನ ದಬ್ಬಾಳಿಕೆಯನ್ನು ಎದುರಿಸುವಾಗ ಒಂದಾಗಿರಲಿ ಇಲ್ಲದಿರಲಿ)

ಎರಡನೆಯದಾಗಿ ಬಲಿಷ್ಠದಾದ ಕ್ರಾಂತಿಕಾರಿ ಪಕ್ಷದ ಮೇಲೆ, ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಕಾರ್ಮಿಕ ವರ್ಗ ಸರಿಯಾದ ನಾಯಕತ್ವ ವಹಿಸುವುದರ ಮೇಲೆ ಅವಲಂಬಿಸಿದೆ.

ಮೂರನೆಯದಾಗಿ ಕಾರ್ಮಿಕರ ವರ್ಗವು ರೈತರ ಮತ್ತು ಸಣ್ಣ ಬಂಡವಾಳಗಾರರ ಬಗ್ಗೆ ತಳೆಯುವ ಸರಿಯಾದ ಧೋರಣೆಯನ್ನು ಅವಲಂಬಿಸಿದೆ.

ನಾಲ್ಕನೆಯದಾಗಿ ಶ್ರಮಿಕ ವರ್ಗದ ದಕ್ಷ ಮತ್ತು ಸಮಯೋಚಿತ ಕಾರ್ಯಾಚರಣೆಯನ್ನು ಅವಲಂಬಿಸಿದೆ.

ಮಿಲಿಯಾಂತರ ಯೂರೋಪಿನ ಕಾರ್ಮಿಕರು ಫ್ಯಾಸಿಸಂನ್ನು ವಿರೋಧಿಸವುದು ಹೇಗೆಂದು ಕೇಳುತ್ತಿದ್ದಾಗ, ದಿಮಿತ್ರೋವ್ ಐಕ್ಯರಂಗ ಮತ್ತು ಐಕ್ಯ ಕಾರ್ಯಾಚರಣೆಯಿಂದ ಎಂಬ ಎಚ್ಚರಿಕೆಯ ಮಾತುಗಳನ್ನು ಎರಡು ಅಂತರ ರಾಷ್ಟ್ರೀಯಗಳಿಂದ ಉದಾಹರಿಸಿ ಹೇಳಿದರು.

ದಿಮಿತ್ರೋವ್ ಪ್ರಕಾರ ಇಂತಹ ಐಕ್ಯತೆಯನ್ನು ತರುವಾಗ ಉಂಟಾಗುವ ಅಡೆ ತಡೆಗಳೆಂದರೆ ಮಿಲಿಯಾಂತರ ಮಾನ್ಯತೆ ಪಡೆಯದ ಶ್ರಮ ಜೀವಿಗಳನ್ನು ಮತ್ತು ಮಿಲಿಯಾಂತರ ಶ್ರಮಜೀವಿಗಳು ಅಲ್ಲದವರನ್ನು ಹೋರಾಟಕ್ಕೆ ತರುವುದು. ಆದರೆ ಕಾರ್ಮಿಕ ಸಂಘಗಳ ಐಕ್ಯತೆ, ಕಾರ್ಮಿಕ ವರ್ಗದ ಐಕ್ಯರಂಗಳೇ ಸಾಲದು. ಇದಕ್ಕಾಗಿ ಫ್ಯಾಸಿಸ್ಟ್ ಶಕ್ತಿಗಳ ವಿರೋಧವಿರುವ ದೊಡ್ಡ ಬಣವನ್ನೇ ನಿರ್ಮಿಸಬೇಕು. "ಶ್ರಮ ಜೀವಿಗಳ ಈ ಹೋರಾಟದಲ್ಲಿ ಯಶಸ್ಸು ಕಾಣಬೇಕಾದರೆ ಒಂದೆಡೆ ಶ್ರಮ ಜೀವಿಗಳ ಹೋರಾಟದ ಮಿತ್ರರು, ಕೃಷಿ ಕಾರ್ಮಿಕರು, ಪಟ್ಟಣದ ಸಣ್ಣ ಬಂಡವಾಳಗಾರರು ಮತ್ತು ಕೈಗಾರಿಕೆಯಿಂದ ಅಭಿವೃದ್ಧಿ ಹೊಂದಿರುವ ನಗರದ ಬಹುಪಾಲು ಜನತೆಯ ನಿಕಟ ಸಂರ್ಕದಿಂದ ಮಾತ್ರ ಸಾಧ್ಯ."

(ಮುಂದಿನ ಸಂಚಿಕೆ ನೋಡಿ)

ಬೆಂಗಳೂರು :

ಕನಿಷ್ಟ ವೇತನ ಜಾರಿಗಾಗಿ ಹೋಟೆಲ್ ಕಾರ್ಮಿಕ ಸಂಘದ ಒತ್ತಾಯ

ಕರ್ನಾಟಕ ಸರಕಾರವು ಹೋಟೆಲ್ ಕಾರ್ಮಿಕರ ವೇತನ ಪರಿಷ್ಕರಿಸುವ ಪ್ರಕಟನೆಯನ್ನು ಇತ್ತೀಚೆಗೆ ಹೊರಡಿಸಿದೆ. ಆದಾಗ್ಯೂ ಎಷ್ಟೋ ಹೋಟೆಲ್‌ಗಳಲ್ಲಿ ಮಾಲೀಕರು ಇದನ್ನು ಜಾರಿಗೆ ಮಾಡುವ ಗೋಜಿಗೇ ಹೋಗಿಲ್ಲ. ಈ ಮಾಲೀಕರ ಒತ್ತಾಯದಿಂದಾಗಿಯೇ ಸರಕಾರ ಅಂತಿಮ ಪ್ರಕಟನೆಯನ್ನು ಪ್ರಕಟಿಸಲು ಸಾಕಷ್ಟು ವಿಳಂಬ ಮಾಡಿತ್ತು. ಅನೇಕ ಹೋರಾಟಗಳ ನಂತರವೇ ಅಂತಿಮ ಪ್ರಕಟನೆ ಹೊರಬಿತ್ತು. ಈ ಕನಿಷ್ಟ ವೇತನ ಕೊಡಲು ಸಾಧ್ಯವಿಲ್ಲವೆಂದು ಹೋಟೆಲ್ ಮಾಲೀಕರು ಹೈಕೋರ್ಟಿನಲ್ಲಿ ತಡೆಯಾಜ್ಞೆಗೆ ಕೋರಿದ್ದರು. ಹೈ ಕೋರ್ಟ್ ತೀರ್ಮಾನವಾಗುವವರೆಗೆ ಪ್ರಕಟನೆಯ ಶೇ. 50 ರಷ್ಟು ವೇತನ ಕೊಡಬೇಕೆಂದು ತಿಳಿಸಿದೆ. ಹೀಗಿದ್ದೂ ಕೋರ್ಟ್ ತೀರ್ಮಾನಿಸಿದ್ದಷ್ಟನ್ನೂ ಸಹ ಮಾಲೀಕರುಗಳು ಕೊಡುತ್ತಿಲ್ಲ. ಕನಿಷ್ಟ ವೇತನ ಜಾರಿಗಾಗಿ ಬೆಂಗಳೂರಿನಲ್ಲಿ ಅನೇಕ ಹೋಟೆಲ್‌ಗಳಲ್ಲಿ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಯಥಾಪ್ರಕಾರ ಪೋಲಿಸಿನವರು ಕಾರ್ಮಿಕರಿಗೆ ಕಿರುಕುಳ ನೀಡುತ್ತಿದ್ದು ವಿನಾಕಾರಣ ಕೇಸ್ ದಾಖಲು ಮಾಡುತ್ತಿದ್ದಾರೆ. ತಾನೇ ಮಾಡಿದ ಕಾನೂನನ್ನು ಜಾರಿಗೆ ತರಲು ಗುಂಡೂರಾವ್ ಸರಕಾರಕ್ಕೆ ತಾಕತ್ತಿಲ್ಲ !

ಸಿ.ಐ.ಟಿ.ಯು. ನೇತೃತ್ವದ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಇ.ಕೆ.ಎನ್.ರಾಜನ್ ಅವರು ಮಾಲೀಕರ ದುರ್ವತನೆಯನ್ನು ಖಂಡಿಸಿ ಕನಿಷ್ಟ ವೇತನವನ್ನು ಕೂಡಲೇ ಜಾರಿ ಮಾಡಬೇಕೆಂದು ಒತ್ತಾಯಿಸಿದ್ದಾರೆ.

●

ರಾಯಚೂರು ಜಿಲ್ಲೆ

ವಿದ್ಯಾರ್ಥಿಗಳ ಹೋರಾಟ

ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿದ್ದು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ.

ಶೈಕ್ಷಣಿಕ ರಂಗದ ಕೆಲವು ಸಮಸ್ಯೆಗಳನ್ನು ತೆಗೆದುಕೊಂಡು ವಿಧ್ಯಾರ್ಥಿ ಸಂಘಟನೆಗಳಾದ ಎಸ್. ಎಫ್. ಐ., ಎ.ಐ ಎಸ್ ಎಫ್., ಕೆ.ಡಿ ಎಸ್.ಎಫ್ (ಕರ್ನಾಟಕ ದಲಿತ ವಿಧ್ಯಾರ್ಥಿ ಫೆಡರೇಷನ್) ಇವುಗಳ ಘಟಕಗಳು ಸ್ಥಳೀಯ ಮಟ್ಟದಲ್ಲಿ ಒಕ್ಕೂಟವನ್ನು ರಚಿಸಿ 21-6-82 ರಿಂದ ಈ ಕೆಳಕಂಡ ಬೇಡಿಕೆಗಳಿಗೋಸ್ಕರ ಹೋರಾಟ ಪ್ರಾರಂಭಿಸಿದ್ದಾರೆ :

(1) ಲಿಂಗಸೂರು ತಾಲ್ಲೂಕು ಕೇಂದ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಬೇಕು.

(2) ಹಟ್ಟಿಯಲ್ಲಿ ಗಣಿತ ಶಾಸ್ತ್ರದಲ್ಲಿ ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಬೇಕು.

(3) ಹಟ್ಟಿಯ ಕಿರಿಯ ಮಹಾ ವಿದ್ಯಾಲಯದಲ್ಲಿ ತಕ್ಷಣ ಪ್ರವೇಶ ನೀಡಬೇಕು.

(4) ಮುದಗಲ್ ಹಾಗೂ ಹಟ್ಟಿ ಕಿರಿಯ ಮಹಾ ವಿದ್ಯಾಲಯಗಳಿಗೆ ಕೂಡಲೆ ಕಟ್ಟಡದ ವ್ಯವಸ್ಥೆಯಾಗಬೇಕು.

(5) ತಾಲ್ಲೂಕಿನ ಶಾಲಾ-ಕಾಲೇಜುಗಳಲ್ಲಿಯ ಶಿಕ್ಷಕರ ಅಭಾವವನ್ನು ನಿವಾರಿಸಬೇಕು

(8ನೇ ಪುಟ ನೋಡಿ)

ಎಸ್.ಎಫ್.ಐ. ರಾಜ್ಯ ಸಮಿತಿಯ ವಿಸ್ತೃತ ಸಭೆ

ಜುಲೈ 16 ಮತ್ತು 17 ರಂದು ಮೈಸೂರಿನಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿಯ ವಿಸ್ತೃತ ಸಭೆಯನ್ನು ಕರೆಯಲಾಗಿದೆ. ಕೇಂದ್ರ ಸಮಿತಿಯ ಅಧ್ಯಕ್ಷರಾದ ಕಾಮ್ರೇಡ್ ಎಂ. ಎ. ಬೇಬಿಯವರು ಈ ಸಭೆಯಲ್ಲಿ ಭಾಗವಹಿಸುತ್ತಾರೆ. ಜುಲೈ 16 ರಂದು ಬೆಳಗ್ಗೆ 11 ಗಂಟೆಗೆ ಪದಾಧಿಕಾರಿಗಳ ಸಭೆಯೂ, ಮಧ್ಯಾಹ್ನ 3 ಗಂಟೆಗೆ ರಾಜ್ಯ ಸಮಿತಿಯ ವಿಸ್ತೃತ ಸಭೆಯೂ ಪ್ರಾರಂಭವಾಗುತ್ತದೆ. ರಾಜ್ಯ ಸಮಿತಿ ಸದಸ್ಯರು ಮತ್ತು ಆಹ್ವಾನಿತರು ಸಕಾಲದಲ್ಲಿ ಹಾಜರಿರಬೇಕಾಗಿ ಕೋರಲಾಗಿದೆ.

ಎಸ್. ಆರ್. ಆರಾಧ್ಯ

ಎಸ್.ಎಫ್.ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ

ರಾಜಕೀಯ ಹೋರಾಟ

(1ನೇ ಪುಟದಿಂದ)

ಏಕೆ ಪ್ರಧಾನಮಂತ್ರಿಯವರು ಆರಿಸಿದ್ದಾರೆ ಎಂಬುದರ ಬಗ್ಗೆ, ಈ ರಾಜಕೀಯ ವಿಶ್ಲೇಷಕರುಗಳು ಮತ್ತು ಸಂಪಾದಕರುಗಳು ಏನೂ ಮಾತಾಡುವುದಿಲ್ಲ.

ವಿರೋಧ ಪಕ್ಷಗಳ ಅಭ್ಯರ್ಥಿ ಯಾಕೆ ?

ವಿರೋಧ ಪಕ್ಷಗಳು ಜೇಲ್‌ಸಿಂಗರನ್ನು ತಿರಸ್ಕರಿಸಿ ಬೇರೆಯವರನ್ನು ಸೂಚಿಸಿದ್ದೇಕೆ ಎಂಬ ಪ್ರಶ್ನೆಯನ್ನು ಕೇಳಬಹುದು. ಇದಕ್ಕೆ ಉತ್ತರ ಜೇಲ್‌ಸಿಂಗರ ಹಿಂದಿನ ಚರಿತ್ರೆಯಲ್ಲಿದೆ. ಇವರು ಇಂದಿರಾರ ಬಗ್ಗೆ "ವೈಯುಕ್ತಿಕ ನಿಷ್ಠೆ" ಯಿರುವುದಕ್ಕಾಗಿ ಮಾತ್ರ ಇವರನ್ನು ಆರಿಸಲಾಗಿದೆ. ತಾನು ಇಂದಿರಾರ ಅತ್ಯಂತ ನಿಷ್ಠಾವಂತ ಹಿಂಬಾಲಕ ಮತ್ತು ವಿಧೇಯಸೇವಕ ಎಂದು ಜೇಲ್‌ಸಿಂಗರೇ ಹೇಳಿಕೊಂಡಿದ್ದಾರೆ. ರಾಷ್ಟ್ರಪತಿಯಾಗುವವರು ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲಕ್ಕಿಂತ ಮೇಲೇನೂ ಇರಬೇಕಾಗಿಲ್ಲ, ಆದರೆ ಪ್ರಧಾನಿಯ "ರಬ್ಬರ್ ಮುದ್ರೆ" ಯಾಗುವ ಕೀಳುಮಟ್ಟಕ್ಕಿಳಿಯಬಾರದು. ಇದಕ್ಕಾಗಿಯೇ ವಿರೋಧ ಪಕ್ಷಗಳು ಜೇಲ್‌ಸಿಂಗರನ್ನು ವಿರೋಧಿಸುವುದು.

ವೈಯುಕ್ತಿಕ ನಿಷ್ಠೆಯೇ ರಾಷ್ಟ್ರಪತಿಯ ಏಕೈಕಲಕ್ಷಣವೆಂದಾದ ಮೇಲೆ ಇದು ಆಳುವ ಪಕ್ಷದ ಸರ್ವಾಧಿಕಾರೀ ಮನೋಭಾವನ್ನು ಎತ್ತಿ ತೋರಿಸುವುದಿಲ್ಲವೆ ? ಕಾಂಗ್ರೆಸ್ ಪಕ್ಷದ ಬಲಾಬಲವನ್ನು ಅದರ ಎಂ. ಪಿ. ಮತ್ತು ಎಂ. ಎಲ್. ಎ. ಗಳ ಸಂಖ್ಯೆಯ ಮೂಲಕ ತಾಳೆ ಹಾಕಿ ಕಾಂಗ್ರೆಸ್ ಅಭ್ಯರ್ಥಿಯ ವಿಜಯ ಖಚಿತ, ಈ ಹೋರಾಟವು ಕೇವಲ "ಸಾಂಕೇತಿಕ" ಎಂದು ಪತ್ರಿಕೆಗಳು ಹೇಳುತ್ತಿವೆ. ಹಾಗಿದ್ದಲ್ಲಿ ವಿರೋಧಪಕ್ಷಗಳು ಏಕೆ ಸ್ಪರ್ಧಿಸಬೇಕು ? ಇದನ್ನು ಹಲವು ರೀತಿಯಲ್ಲಿ ಉತ್ತರಿಸಬಹುದು. ಒಂದು ಅನೇಕ ಕಾಂಗ್ರೆಸ್ (ಐ) ಸದಸ್ಯರ ಪ್ರಜಾಪ್ರಭುತ್ವವಾದೀ ಆತ್ಮಸಾಕ್ಷಿಯನ್ನು ಜಾಗೃತಗೊಳಿಸಿ ಅನಿರೀಕ್ಷಿತ ಪಲಿತಾಂಶ ಉಂಟು ಮಾಡಬಹುದು. ಎರಡನೆಯದಾಗಿ ಈ ಪಲಿತಾಂಶ ಉಂಟಾಗದಿದ್ದರೂ ಈ ಸ್ಪರ್ಧೆಯನ್ನು ರಾಜಕೀಯ ಹೋರಾಟ ಅಂದರೆ ವಿರೋಧಪಕ್ಷಗಳೊಡನೆ ಆಳುವ ಪಕ್ಷದವರ್ತನೆ ಸಹಕಾರದ್ದಾಗಿರಬೇಕೊ ಅಥವಾ ಘರ್ಷಣೆಯಿಂದರಬೇಕೊ ಎಂಬ ಪ್ರಶ್ನೆಯನ್ನಾಗಿ ಮಾಡಬಹುದು.

ನಮಗೆಲ್ಲಾ ಸಮಾಧಾನದ ಅಂಶವೆಂದರೆ ವಿರೋಧ ಪಕ್ಷಗಳೆಲ್ಲ ಐಕ್ಯಮತದಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿರುವುದು. ಇದೇ ಪ್ರಧಾನಿಗೆ ಆತಂಕವನ್ನು ಉಂಟುಮಾಡಿದೆ. ಕೆಲವು ಎಡವಾದೀ ಪತ್ರಿಕೆಗಳು ವಾಮಪಕ್ಷಗಳನ್ನು ಈ ಹೋರಾಟದಲ್ಲಿ ಬೂರ್ಜ್ವಾ ವಿರೋಧ ಪಕ್ಷಗಳೊಂದಿಗೆ ಸೇರಬಾರದೆಂದು ಹೇಳಿವೆ. ಈ ಸಲಹೆಯನ್ನು ನಾವು ತಿರಸ್ಕರಿಸಿದ್ದರ ಬಗ್ಗೆ ನಮಗೆ ಹೆಮ್ಮೆಯಾಗುತ್ತದೆ.

ವಿರೋಧ ಪಕ್ಷದ ನಾಯಕರನ್ನು ವೈಯುಕ್ತಿಕವಾಗಿ ಭೇಟಿ ಮಾಡುವುದರ ಮೂಲಕ ವಿರೋಧಿ ಐಕ್ಯತೆಯನ್ನು ಒಡೆಯುವ ಇಂದಿರಾರ ಸಂಚುವಿಫಲವಾಗಿದೆ. ವಿರೋಧಪಕ್ಷಗಳು ಒಟ್ಟಾಗಿ. ಪ್ರಜಾಪ್ರಭುತ್ವಕ್ಕೆ ಬದ್ದನಾಗಿರುವ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದಾವೆ.

ವಿದ್ಯಾರ್ಥಿಗಳ ಹೋರಾಟ

(7ನೇ ಪುಟದಿಂದ)

(6) ಹಟ್ಟಿಯ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗೆ ಸಾಕಷ್ಟು ಸ್ಥಳಾವಕಾಶ ಮಾಡಿಕೊಡಬೇಕು.

(7) ಹಟ್ಟಿಯಲ್ಲಿ ಶಿಕ್ಷಕರಿಗೆ ವಸತಿ ಸೌಕರ್ಯ ಒದಗಿಸಬೇಕು.

(8) ಸರಕಾರಿ ವಿದ್ಯಾರ್ಥಿನಿಲಯಗಳಲ್ಲಿ ನಡೆಯುವ ಅನ್ಯವಹಾರ ನಿಲ್ಲಿಸಬೇಕು...ಇತ್ಯಾದಿ.

ಈ ಬೇಡಿಕೆಗಳನ್ನು ಮುಂದಿಟ್ಟು 1-6-82 ರಂದು ಮುಂಗಲ್‌ನಲ್ಲಿ ಎಸ್. ಎಫ್. ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆಯ ಮೂಲಕ ಕುಷ್ಟಗಿಯ ಶಾಸಕರಿಗೆ ಮನವಿ ಸಲ್ಲಿಸಲಾಯಿತು. ಲಿಂಗಸೂರಿನಲ್ಲಿ ವಿದ್ಯಾರ್ಥಿಗಳು ಬೃಹತ್ ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿಗಳಿಗೆ ಬೇಡಿಕೆಯ ಮನವಿ ಪತ್ರವನ್ನು ಅರ್ಪಿಸಲಾಯಿತು.

ಕೂಡಲೇ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಒಕ್ಕೂಟದ ಸಂಚಾಲಕರು ತಿಳಿಸಿದ್ದಾರೆ. ಲಿಂಗಸೂರಿನಲ್ಲಿ ಮೆರವಣಿಗೆ ನಂತರ ನಡೆದ ವಿದ್ಯಾರ್ಥಿಗಳ ಸಭೆಯನ್ನುದ್ದೇಶಿಸಿ ಎಸ್ ಎಫ್.ಐ. ರಾಜ್ಯ ಕಾರ್ಯದರ್ಶಿ ಕಾಂ| ಕೆ. ಬಸವರಾಜ ಹಾಗೂ ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿರುಪಾಕ್ಷ ಮತ್ತಿತರ ವಿದ್ಯಾರ್ಥಿ ಮುಖಂಡರು ಮುಂದಿನ ಹೋರಾಟದ ರೂಪರೇಖೆಗಳ ಕುರಿತು ಮಾತನಾಡಿದರು.

ಗೋಲಿಬಾರಿಗೆ ಐವರ ಬಲಿ

(1ನೇ ಪುಟದಿಂದ)

ಚಿನ್ನದ ಗಣಿಗಳಲ್ಲಿ 13,000 ಕೆಲಸಗಾರರಿದ್ದು, ಅವರಲ್ಲಿ ನೂರಕ್ಕೆ 99 ತಮಿಳು ಮಾತನಾಡುವವರೇ ಆಗಿದ್ದು, ಚಿನ್ನದ ಗಣಿ ಪ್ರದೇಶದ ಬಹುಸಂಖ್ಯಾತ ಜನ ತಮಿಳು ಭಾಷಿಗರೇ ಆಗಿರುವರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಸದಸ್ಯ ಮತ್ತು ಸಿ.ಐ.ಟಿ.ಯು.ವಿನ ರಾಜ್ಯ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ತಾರೀಕು 7 ರಂದು ಕೆ.ಜಿ.ಎಫ್.ಗೆ ಭೇಟಿ ಇತ್ತು ಪರಿಸ್ಥಿತಿಯ ಅಧ್ಯಯನ ಮಾಡಿ, ಅಲ್ಲಿ ಬೀಡು ಬಿಟ್ಟಿದ್ದ ಉನ್ನತ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಹಿಂದಿರುಗಿರುವರು. ಕಾಂ. ಸೂರ್ಯನಾರಾಯಣರಾವ್, ಕ್ರಾಂತಿರಂಗದ ಶಾಸಕ ಶ್ರೀ ಪೆರುಮಾಳ್ ಮತ್ತು ಜನತಾ ಪಕ್ಷದ ಪ್ರತಿನಿಧಿ ಮೊದಲಾದವರು ಕೆ.ಜಿ ಎಫ್. ನಲ್ಲಿ ಬೀಡು ಬಿಟ್ಟಿದ್ದ ಉನ್ನತ ಪೋಲೀಸ್ ಅಧಿಕಾರಿಗಳು ಮತ್ತು ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ಭೇಟಿಯಾಗಿ ಪರಿಸ್ಥಿತಿಯು ಹದಗೆಡುವುದಕ್ಕೆ ಪೋಲೀಸರು ಅನುಸರಿಸಿರುವ ಕ್ರಮಗಳೇ ಕಾರಣವೆಂದು ಹೇಳಿ, ಪರಿಸ್ಥಿತಿಯನ್ನು ಹತೋಟಿಗೆ ತಂದು ಶಾಂತಿಯನ್ನು ಕಾಪಾಡಲು ಈ ಕೆಳಗಿನ ಸೂಚನೆಗಳನ್ನಿತ್ತರು (1) ಪೋಲೀಸರು ಜನರಿಗೆ ಕೊಡುತ್ತಿರುವ ಹಿಂಸೆಯನ್ನು ನಿಲ್ಲಿಸಿ, ಪೋಲೀಸರು ಮನೆಗಳಿಗೆ ನುಗ್ಗದಂತೆ ಮಾಡುವುದು (2) ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡಿ, ಅವರ ಮೇಲಿನ ಕೇಸುಗಳನ್ನು ಹಿಂತೆಗೆಯುವುದು. (3) ಗೋಲೀಬಾರಿನಲ್ಲಿ ಮೃತರಾದವರ ಕುಂಟುಂಬಗಳಿಗೂ, ಗಾಯಗೊಂಡವರಿಗೂ ಸಾಕಷ್ಟು ಪರಿಹಾರ ಕೊಡುವುದು. ಈ ಬಗ್ಗೆ ಸಹಾನುಭೂತಿಯಿಂದ ನೋಡುವುದಾಗಿ ಉನ್ನತಾಧಿಕಾರಿಗಳು ಭರವಸೆ ಇತ್ತಿದ್ದು, ಈ ವರದಿಯು ಅಚ್ಚಿಗೆಹೋಗುವ ಹೊತ್ತಿಗೆ ಪರಿಸ್ಥಿತಿಯು ಸುಧಾರಿಸುತ್ತಿರುವುದಾಗಿ ಸುದ್ದಿ ಬಂದಿದೆ.

ಕೆ.ಜಿ.ಎಫ್.ನಲ್ಲಿ ಪೋಲೀಸರು ನಡೆಸಿರುವ ಅತಿರೇಕವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಮತ್ತು ಕೋಲಾರ ಜಿಲ್ಲಾ ಸಮಿತಿಗಳು ಉಗ್ರವಾಗಿ ಖಂಡಿಸಿ, ಈ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆಯನ್ನು ನಡೆಸಲು ಒತ್ತಾಯಿಸಿವೆ. ಭಾಷೆಯ ಪ್ರಶ್ನೆಯ ಬಗ್ಗೆ ಸರಕಾರವು ಅನುಸರಿಸುತ್ತಾ ಬಂದಿರುವ ಗೊಂದಲಮಯ ನೀತಿಯೇ ಕೆ.ಜಿ.ಎಫ್.ನಲ್ಲಿನ ಘಟನೆಗಳ ಬೆಳವಣಿಗೆಗೆ ಕಾರಣಗಳಾಗಿವೆ ಎಂದಿರುವ ಸೆಕ್ರೆಟಾರಿಯೆಟ್, ಭಾಷಾ ಅಲ್ಪಸಂಖ್ಯಾತರ ಭಾವನೆಗಳನ್ನೂ, ಅವರಲ್ಲಿರುವ ಭಯವನ್ನೂ ಅರಿತುಕೊಂಡು, ಭಾಷಾ ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿದೆ.

ಶ್ರದ್ಧಾಂಜಲಿ

ಜೂನ್ 22 ರಂದು ಕಲ್ಕತ್ತದಲ್ಲಿ ನಿಧನರಾದ ಅಖಿಲ ಭಾರತ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕಾಂ| ಪಂಕಜ ಆಚಾರ್ಯ ಅವರ ನಿಧನಕ್ಕೆ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮಂಗಳೂರು ಘಟಕವು ಸಂತಾಪ ವ್ಯಕ್ತಪಡಿಸಿದೆ.

ಕಾಂ| ಪಂಕಜ ಅವರ ನಿಧನದಿಂದಾಗಿ ಮಹಿಳಾ ಸಂಘಟನೆಗೆ ತುಂಬಲಾರದ ನಷ್ಟವಾಗಿದೆ ಎಂದು ಮಂಗಳೂರು ಘಟಕದ ಕಾರ್ಯದರ್ಶಿ ಕಾಂ| ಆಶಾ ದುಃಖ ವ್ಯಕ್ತಪಡಿಸಿದ್ದಾರೆ.

ಹಸಿದ ಕಣ್ಗಳಿಂದ

ಕನ್ನಡದ ರಾಜ

'ರಾಜರ ಕಾಲವೆಲ್ಲ ಹೊರಟು ಹೋಯಿತು' ಎಂದು ಯೋಚಿಸುವಷ್ಟರಲ್ಲೇ ನಮ್ಮ ಕನ್ನಡ ಸಿನಿಮಾದ ರಾಜಕುಮಾರರು ಕನ್ನಡ ನಾಡಿನಲ್ಲಿ ಜಾಥಾ ಮಾಡುತ್ತ "ಕಾದು ನೋಡಿ" ಎಂದು ಕನ್ನಡಿಗರಿಗೆ ಕುತೂಹಲ ಹುಟ್ಟಿಸುತ್ತಿದ್ದಾರೆ. ಇವರ ಜಾಥಾದ ಮಾತು ಕೇಳಿ ಕೆಲವು ಕಾಂಗ್ರೆ ಶಾಸಕರು ಕಾವೇರುತ್ತಿದ್ದಾರೆ; ಗುಂಡೂರಾಯರು ಗುಡುಗುತ್ತಿದ್ದಾರೆ. ಆದರೆ ಕೋಲಾರದ ಕನ್ನಡ ಮತ್ತು ಅಲ್ಲಿನ ಅಲ್ಪ ಸಂಖ್ಯಾತರು ಅನಾಥರಾಗುತ್ತಿದ್ದಾರೆ !

ಬೇಗನೆ ಬಾರಯ್ಯ

ಅರೆ ! ನಮ್ಮ ಬೇಗಾನೆ ರಾಮಯ್ಯ ಇದ್ದಕ್ಕಿದ್ದಾಗೆ ಕವಿಯಾಗಿ ಬಿಟ್ಟಿದ್ದಾರೆ ಗೊತ್ತೆ ? ಮೊನ್ನೆ ಸದನದಲ್ಲಿ ಗ್ರಾಮಾಂತರ ಅಭಿವೃದ್ಧಿ ಬಗ್ಗೆ ಭಾಷಣ ಮಾಡುವುದು ಬಿಟ್ಟು ಕವನ ವಾಚನ ಮಾಡಿದರಂತೆ, ಅವರು ಏನು ಹೇಳುತ್ತಾರೆ ಗೊತ್ತೆ ?" ನಾನು ಕಬ್ಬಿಣದಷ್ಟು ಕಠೋರ. ಹೂವಿನಷ್ಟು ಮೃದು"

ಆದರೆ ಈ ರಾಮಯ್ಯನವರ ನವ್ಯ ಕಾವ್ಯ ಕೇಳಿ ಸದನದಲ್ಲಿ ನಿದ್ದೆ ಮಾಡುತ್ತಿದ್ದ ಕಾಂಗ್ರೆ ಶಾಸಕರೊಬ್ಬರು ಗೊಣಗಿದ್ದಾರಂತೆ ! "ಈ ಕವನ ನನ್ನ ನಿದ್ದೆ ಹಾಳು ಮಾಡುತ್ತಿದೆ ಎಂದು !"

ಹೆಂಡ ಇಳಿಸುವ ದಲಿತರು

ಈ ದೇಶದ ಮಣ್ಣಿನಲ್ಲಿ ಧೂಳಾದ ದಲಿತರ ಮೇಲೆ ನಡೆಯುತ್ತ ಬಂದ ಬಂಡವಾಳಶಾಹಿಗಳು ದಲಿತರ ಬದುಕಿನ ಮೇಲೆ ದೊಡ್ಡ ಹೆಜ್ಜೆ ಗುರುತು ಮೂಡಿಸಿದ್ದಾರೆ. ಆ ಹೆಜ್ಜೆಗಳ ಅಡಿಯಲ್ಲಿ ಹೆಂಡ ಇಳಿಸುವ ದಲಿತರು. ಇವರ ದುಡಿಮೆಯ ಬೆವರನ್ನು 'ಹೆಂಡ' ಮಾಡಿ ಮಾರಿ, ಇವರ ಬದುಕಿನ ಮೇಲೆ ಗೋರಿ ಕಟ್ಟುವ ಎಕ್ಸೈಜ್ ಕಂಟ್ರಾಕ್ಟರರು ಈ ನಾಡಿನ ದೊಡ್ಡ ಬಂಡವಾಳಶಾಹಿಗಳು.

ಇದೀಗ ಮೊಟ್ಟ ಮೊದಲ ಬಾರಿಗೆ ಈ ಬಂಡವಾಳಶಾಹಿಗಳ ವಿರುದ್ಧ ಹೆಂಡ ಇಳಿಸುವ ದಲಿತರು ಬಂಡೆದ್ದಿದ್ದಾರೆ. ಇದು ಹೆಜ್ಜೆ ಮೂಡಿಸುವ ಹಾದಿಗಳನ್ನು ಬದಲಾಯಿಸುವ ಹೋರಾಟ.

ಎಲ್ಲಿ ಬಂಗಾರು....?

"ನಮ್ಮ ಸೊರಬದ ಯುವಕ ಬಂಗಾರಪ್ಪ ಇದ್ದಕ್ಕಿದ್ದಂತೆ ಕಳೆದು ಹೋದರಂತೆ! "

"ಹೌದೆ ... ಎಲ್ಲಿ ?

" ನಿಮಗೆ ಗೊತ್ತೇ ಇಲ್ವಾ ? 'ಐ' ನ ಕೈ ಒಳಗೆ ಕಳೆದುಕೊಂಡು ಕೈ ಕೈ ಹಿಸುಕಿಕೊಳ್ಳುತ್ತಿದ್ದಾರಂತೆ !"

"ಛೇ....ಛೇ ಅವರಿಗೇನಾಯಿತು ? "

"ಏನು ಆಗಲಿಲ್ಲ, ಎಷ್ಟು ದಿನ ಅಂತ ಕಾಯೋದು ಹೆಣ್ಣು ಪಿಶಾಚಿಯ ಕೈಯೊಳಗೆ ! ಈ 'ಐ' ನವರಿಗೆ ಒಂದು ಕೈ ತೋರಿಸಲು ಹೊರಬಂದಿದ್ದಾರಂತೆ !"

"ಹಾಗಾದರೆ ಈಗ ಮತ್ತೇನು ? "

"ಕನ್ನಡ ಪಕ್ಷ ಹುಟ್ಟುತ್ತಿದೆ ಕನ್ನಡ ಕುಮಾರರಿಂದ. ರಾಜರಿಗೆ ಮಾಜಿ ಮಂತ್ರಿಗಳು ಹೆಗಲು ಕೊಟ್ಟು 'ತೆಲುಗು ದೇಶಂ'ಗೆ ಬೆನ್ನು ಕೊಡುತ್ತಿದ್ದಾರಂತೆ !"

"ಹಾಗಾದರೆ ಮುಂದಿನ ಮುಖ್ಯ ಮಂತ್ರಿ...?"

"ಅದನ್ನು ಮಾತ್ರ ಕೇಳಬೇಡಿ ತೆರೆಯ ಮೇಲೆ ನೋಡಿ"

— ಕಲಾಲ್

Printed & Published by P. Ramachandra Rao by him on behalf of the Communist Party of India (Marxist) Karnataka State Committee. L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.